ಮೇಲೆ ಹೊರಗಡೆ ಕಾರ್ಮಿಕರು ಯಾವ ರೀತಿ ಜೀವನ ಮಾಡಬೇಕು ಅವರ ಪರಿಸ್ಥಿತಿ ಏನಾಗುತ್ತದೆ ಎನ್ನುವುದನ್ನು ತಾವುಗಳು ಯೋಚನೆ ಮಾಡಬೇಕು. ಆದ್ದರಿಂದ ತಾವು ತೆರಿಗೆಯನ್ನು ಜಾಸ್ತಿ ಮಾಡುವುದರಿಂದ ಬೆಲೆಗಳು ಜಾಸ್ತಿಯಾಗಿ ತೊಂದರೆಯೇ ಜಾಸ್ತಿಯಾಗುತ್ತದೆ. ಆದ್ದರಿಂದ ತಾವು ಇದನ್ನು ಕಡಿಮೆ ಮಾಡುವ ಪ್ರಯತ್ನ ಮಾಡಬೇಕು ಎಂದು ಕೇಳಿಕೊಳ್ಳುತ್ತೇನೆ ಮತ್ತು ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಅರ್ಧ ಗಂಟೆ ಕಾಲದ ಚರ್ಚೆ

(ವಿಳಿನೆ ಸಂಖ್ಯೆಯ ಚುಕ್ಕೆ ಗುರುತಿನ ಪ್ರಶ್ನೆಗೆ ನೀಡಲಾದ ಉತ್ತರದಿಂದ ಉದ್ಭವಿಸಿದ ವಿಷಯದ ಮೇಲೆ.)

ವಿಷಯ : — ಹೈದರಾಬಾದ್–ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ.—

ಶ್ರೀ ಧರ್ಮಸಿಂಗ್ (ಜೇವರ್ಗಿ).—ಮಾನ್ಯ ಅಧ್ಯಕ್ಷರೇ, ಮಾನ್ಯ ಸದಸ್ಯರಾದ ಬಾಪೂಗೌಡ ಅವರು ಹೈದರಾಬಾದ್ ಕರ್ನಾಟಕ ಡೆವಲಪ್‌ಮೆಂಟ್ ಬೋರ್ಡ್ ಬಗ್ಗೆ ಒಂದು ಪ್ರಶ್ನೆಯನ್ನು ಕೇಳಿದಾಗ ಕೆಲವು ವಿಚಾರಗಳನ್ನು ಮಾನ್ಯ ಮಂತ್ರಿಗಳಾದ ದೇವೇಗೌಡ ಅವರು ಹೇಳಿದರು. ಈ ಒಂದು ವಿಷಯದ ಬಗ್ಗೆ ನಮ್ಮ ಪರಿಯಾದ ಎಲ್ಲಾ ಸದಸ್ಯರು ಕೂಡಿ ಇಲ್ಲಿ ಚರ್ಚೆ ಮಾಡಬೇಕು ಎಂದು ತಮ್ಮ ಅನುಮತಿಯನ್ನು ಕೇಳಿದ್ದಕ್ಕೆ ತಾವು ಅವಕಾಶವನ್ನೂ ಕೊಟ್ಟಿದ್ದೀರಿ. ಈಗ ಮಾನ್ಯ ಮುಖ್ಯ ಮಂತ್ರಿಗಳೂ ಸಹ ಸಭೆಯಲ್ಲಿದ್ದಾರೆ. ಈ ಚರ್ಚೆಯ ಉದ್ದೇಶ ಎಂದರೆ, ನಮ್ಮ ಹೈದರಾಬಾದ್ ಕರ್ನಾಟಕ ಪರಿಯಾದಲ್ಲಿ ಯಾವರೀತಿಯಲ್ಲಿ ಕೆಲಸಕಾರ್ಯಗಳು ಆಗಬೇಕಾಗಿದೆ, ೧೯೫೬ ರಿಂದ ಈ ಭಾಗದಲ್ಲಿ ಯಾವ ರೀತಿಯಲ್ಲಿ ಕೆಲಸಕಾರ್ಯಗಳು ಆಗಿವೆ ಎನ್ನುವುದನ್ನು ನಾವು ನೋಡಿದಾಗ, ಅಲ್ಲಿ ಇನ್ನೂ ಹೆಚ್ಚಿನ ಕೆಲಸ ಕಾರ್ಯಗಳು ಆಗಬೇಕಾಗಿರುವುದು ನಮಗೆ ಕಂಡುಬರುತ್ತದೆ ಈ ಭಾಗದಲ್ಲಿ ಜನರಿಗೆ ಹೆಚ್ಚಿನ ಅನುಕೂಲಗಳಿಲ್ಲ, ಇದರ ಬಗ್ಗೆ ಸರ್ಕಾರದವರೂ ಕೂಡ ಹೆಚ್ಚಿನ ಆದ್ಯತೆಯನ್ನು ಕೊಟ್ಟಿಲ್ಲವೆಂದು ನಮ್ಮ ಭಾವನೆ. ಈ ಒಂದು ಭಾವನೆಯಿಂದಲೇ ನಾವುಗಳು ಅಲ್ಲಿ ಸಾಕಷ್ಟು ಕೆಲಸಕಾರ್ಯಗಳು ಜನರಿಗೆ ಆಗಬೇಕಾಗಿದೆ, ಈ ಭಾಗ ಬಹಳ ಹಿಂದುಳಿದ ಭಾಗವಾಗಿದೆ, ಮತ್ತು ರೀಜನಲ್ ಇಂಬ್ಯಾಲೆನ್ಸ್ ಎನ್ನತಕ್ಕ ಮಾತು ಏನು ಇದೆ ಅದನ್ನು ಸರ್ಕಾರದವರು ಮನಗಂಡು ತಕ್ಷಣ ಇದನ್ನು ಹೋಗಲಾಡಿಸುವ ಕೆಲಸಕ್ಕೆ ಆದ್ಯತೆ ಸಿಕ್ಕಬೇಕು ಎನ್ನುವಂಥ ಉದ್ದೇಶದಿಂದ ನಾವು ಈ ಚರ್ಚೆಯನ್ನು ಮಾಡಬೇಕಾಗಿದೆ. ಇದರ ಒಂದು ಪರಿಣಾಮವಾಗಿ ಹಿಂದೆ, ೧೯೮೦ರ ಪೇ, ದಿನಾಂಕ ೩ ರಂದು ಹಿಂದಿನ ಸರ್ಕಾರದವರು ಒಂದು ಬೋರ್ಡನ್ನು ಕಾನ್ಸ್‌ಟಿಟ್ಯೂಟ್ ಮಾಡಿದರು. ಆ ಕಮಿಟಿಯ ಅಧ್ಯಕ್ಷ ನಾನೆ ಆಗಿದ್ದು, ಅವರಲ್ಲಿ ಜಿಲ್ಲಾ ಮಂತ್ರಿಗಳು ಮತ್ತು ಶಾಸಕರು ಲೋಕಸಭೆಯ ಸದಸ್ಯರು ಸದಸ್ಯರಾಗಿದ್ದರು. ಈ ಕಮಿಟಿಯವರು ಈ ಭಾಗದಲ್ಲಿ ಯಾವ ರೀತಿಯ ಕೆಲಸ ಕಾರ್ಯಗಳು ಆಗಬೇಕು, ಯಾವ ರೀತಿಯಲ್ಲಿ ಸರ್ಕಾರ ಸಹಾಯ ಮಾಡಬೇಕು ಎಂದು ಕೆಲವು ಸಲಹೆಗಳನ್ನು ಅವರು ಕೊಡಬೇಕಾಗಿತ್ತು. ಇಂಥ ಒಂದು ಪರಿಪಾಠ ಬೇರೆ ರಾಜ್ಯಗಳಲ್ಲಿರಬಹುದೆಯೊಂದು ನಾನು ತಿಳಿದುಕೊಂಡು, ಅಲ್ಲಿ ಯಾವ ರೀತಿಯ ಒಂದು ವ್ಯವಸ್ಥೆಯನ್ನು ಮಾಡಿದ್ದಾರೆಂದು ತಿಳಿದುಕೊಳ್ಳುವುದಕ್ಕೆ ಹೈದರಾಬಾದ್‌ಗೂ ಸಹ ಹೋಗಿ ಬಂದಿದ್ದೇನೆ. ಅಧ್ಯಕ್ಷರೇ, ತಮಗೆ ಗೊತ್ತಿರುವ ಹಾಗೆ ಹಿಂದೆ ೧೯೬೮ ರಲ್ಲಿ ತೆಲಂಗಾಣದಲ್ಲಿ ಆಂದಿನ ಸರ್ಕಾರ ಈ ಭಾಗಕ್ಕೆ ಸರಿಯಾದ ರೀತಿಯಲ್ಲಿ ಅನುಕೂಲ ಮಾಡುತ್ತಿಲ್ಲ, ದುಡ್ಡು ಕೊಡುತ್ತಿಲ್ಲವೆಂದು ಅವರು ಒಂದು ದೊಡ್ಡ ಆಂದೋಲನವನ್ನು ಮಾಡಿದರು. ಅದರ ಪರಿಣಾಮವಾಗಿ ಸರ್ಕಾರದವರು ಅಲ್ಲಿ ಸುಮಾರು ಮೂರುಕೋಟಿ ರೂಪಾಯಿಗಳನ್ನು ಮಂಜೂರು ಮಾಡಿ ಅಲ್ಲಿ ಅಭಿವೃದ್ಧಿ ಕಾರ್ಯಗಳಿಗೆ ಹಣವನ್ನೂ ಕೂಡ ಖರ್ಚು ಮಾಡಿದರು. ಇದಲ್ಲದೆ ಅವರು ಅಲ್ಲಿ ರಾಯಲ್ ಸೀಮಾ ಬೋರ್ಡ್ ಎಂದು ಒಂದು ಬೋರ್ಡನ್ನು ಮಾಡಿಕೊಂಡು ಹಿಂದುಳಿದ ಭಾಗಗಳನ್ನು ಅಭಿವೃದ್ಧಿ ಮಾಡುವಂಥ ಕೆಲಸವನ್ನು ಮಾಡುತ್ತಿದ್ದಾರೆ, ಅದೇ ರೀತಿಯಲ್ಲಿ ಮಹಾರಾಷ್ಟ್ರದಲ್ಲಿಯೂ ಸಹ ಮಹಾರಾಷ್ಟ್ರ ಡೆವಲಪ್‌ಮೆಂಟ್ ಕಾರ್ಪೊರೇಷನ್ ಎಂದು ಮಾಡಿದ್ದಾರೆ, ವೆಸ್ಟ್ ಬಂಗಾಳದಲ್ಲಿಯೂ ಸಹ ಒಂದು ಬೋರ್ಡನ್ನು ಮಾಡಿದ್ದಾರೆ. ಉತ್ತರ ಪ್ರದೇಶದಲ್ಲಿಂತೂ ಸಹ ಅವರೂ ಒಂದು ಬೋರ್ಡನ್ನು ಮಾಡಿಕೊಂಡಿದ್ದಾರೆ. ಈ ರಾಜ್ಯಗಳಲ್ಲಿ ಯಾವುದೇ ಒಂದು ಭಾಗ

ಹಿಂದುಳಿದಿದ್ದರೂ ಸಹ ಅದನ್ನು ಅಭಿವೃದ್ಧಿ ಮಾಡುವ ಸಲುವಾಗಿ ಈಬೋರ್ಡಿನವರು ಸೂಕ್ತ ಕಾರ್ಯಕ್ರಮಗಳನ್ನು ಹಾಕಿಕೊಂಡು ಸರ್ಕಾರದಿಂದ ಹಣವನ್ನು ಪಡೆದು ಖರ್ಚು ಮಾಡತಕ್ಕ ವ್ಯವಸ್ಥೆಯನ್ನು ಅವರುಗಳು ಮಾಡಿಕೊಂಡಿದ್ದಾರೆ ಈ ಒಂದು ರೀತಿಯಲ್ಲಿಯೇ ಮುಂಬೈ ಕರ್ನಾಟಕದಲ್ಲಿ ರಾಯಚೂರು, ಗುಲ್ಬರ್ಗ ಮತ್ತು ಬೀದರ್ ಜಿಲ್ಲೆಗಳಲ್ಲಿ ಇಂಥ ವ್ಯವಸ್ಥೆಯಾಗಬೇಕು ಎಂದು ಮಾಡಿ, ಸರ್ಕಾರದಿಂದ ಹಣವನ್ನು ಪಡೆದು ಖರ್ಚು ಮಾಡುತ್ತಾ ಬಂದಿದ್ದೇವೆ. ಇವತ್ತು ನಾವು ಜಿಲ್ಲೆಗಳಲ್ಲಿ ಎಲ್ಲಾ ಜಿಲ್ಲೆಗಳಲ್ಲಿ ಸರಿಸಮಾನವಾಗಿ ಕೆಲಸ ಕಾರ್ಯಗಳು ಆಗಬೇಕಾದರೆ, ಸರಿಯಾದ ರೂಢಿಗಳು ಆಗಬೇಕಾಗಿದೆ. ಕಾಡಿಯುಪನೀರಿನ ವ್ಯವಸ್ಥೆ ಯಾಗಬೇಕಾಗಿದೆ, ಮತ್ತು ಇನ್ನು ಯಾವ ಯಾವ ಕೆಲಸ ಕಾರ್ಯಗಳು ಆಗಬೇಕು ಎನ್ನುವುದರ ಬಗ್ಗೆ ನಮ್ಮ ಜಿಲ್ಲಾಧಿಕಾರಿಗಳು ಸರ್ಕಾರಕ್ಕೆ ಒಂದು ಸುದೀರ್ಘವಾದ ವರದಿಯನ್ನು ಸೊಟ್ಟಿದ್ದಾರೆ, ಮತ್ತು ಇದನ್ನು ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತೆಗೆದುಕೊಂಡು ಬಂದಿದ್ದಾರೆ ಹಿಂದಿನ ಸರ್ಕಾರದವರು ಗುಲ್ಬರ್ಗದಲ್ಲಿ ನಡೆದಂಥ ತಮ್ಮ ಸಚಿವ ಸಂಪುಟ ಸಭೆಯಲ್ಲಿ ಈ ಭಾಗದಲ್ಲಿ ಏನೇನು ಸಮಸ್ಯೆಗಳು ಇವೆ, ಇದು ಬೇರೆ ಭಾಗದಂತೆ ಯಾವ ರೀತಿಯಲ್ಲಿ ಅಭಿವೃದ್ಧಿ ಯಾಗ ಬೇಕಾಗಿದೆ, ಜನರಿಗೆ ಯಾವ ಯಾವ ಅನುಕೂಲಗಳನ್ನು ಮಾಡಬೇಕು ಎಂದು ಒಂದು ಸಬ್‌ಕಮಿಟಿಯನ್ನೂ ತೆಗೆದುಕೊಂಡಿದ್ದಾರೆ. ಅವರ ಒಂದು ನಿರ್ಣಯದಂತೆ ಮತ್ತು ವರ್ಷಗಳಲ್ಲಿ ಈ ಭಾಗಕ್ಕೆ ಸುಮಾರು ೩೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ. ಹತ್ತು ವರ್ಷಗಳಾದ ಮೇಲೆ ಈ ಭಾಗಗಳು ಬೇರೆ ಭಾಗಗಳಿಗೆ ಸಮಾನವಾಗಿ ಬರಬೇಕು ಎನ್ನುವಂಥ ಮಾತನ್ನು ಅಂದಿನ ಮುಖ್ಯಮಂತ್ರಿಗಳು ಹೇಳಿದ್ದಾರೆ. ಆರನೆಯ ಪಂಚವಾರ್ಷಿಕ ಯೋಜನೆಯ ಅವಧಿಯಲ್ಲಿ ಈ ಭಾಗಕ್ಕೆ ಸುಮಾರು ೪೫ ಕೋಟಿ ರೂಪಾಯಿಗಳನ್ನು ಕೊಡಲಾಗಿದ್ದು ೧೯೮೨–೮೩ರಲ್ಲಿ ೧೦ ಕೋಟಿ ರೂಪಾಯಿಗಳನ್ನು ಮತ್ತು ೮೩–೮೪ ರಲ್ಲಿ ೧೫ ಕೋಟಿ ರೂಪಾಯಿಗಳನ್ನು, ೮೪–೮೫ರಲ್ಲಿ ೨೫ ಕೋಟಿ ರೂಪಾಯಿ ಇನ್ನು ಮುಂದೂ ಮುಂಬೈ ಕರ್ನಾಟಕಕ್ಕೆ ಪಂಚವಾರ್ಷಿಕ ಯೋಜನೆಯಲ್ಲಿ ಸುಮಾರು ೨೦೦ ಕೋಟಿ ರೂಪಾಯಿಗಳನ್ನು ಕೊಡಲಾಗುವುದು ಎಂದು ಹೇಳಿದ್ದಾರೆ. ಏಳನೆ ಪಂಚವಾರ್ಷಿಕ ಯೋಜನೆಯಲ್ಲಿ ಸುಮಾರು ೧೦೫ ಕೋಟಿ ರೂಪಾಯಿಗಳನ್ನು ಈ ಭಾಗಕ್ಕೆ ಕೊಡಲಾಗುವುದು ಎಂದು ಹೇಳಿದ್ದಾರೆ. ೩೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡತಕ್ಕ ಒಂದು ಯೋಜನೆಯನ್ನು ಹಾಕಿಕೊಳ್ಳಲಾಗಿದೆ ಈ ಹಣವನ್ನು ಹಿಂದುಳಿದ ಭಾಗಗಳಿಗೆ ಖರ್ಚು ಮಾಡಿದರೆ ಅವರಿಗೆ ನ್ಯಾಯವನ್ನು ದೊರಕಿಸಿದಂತಾಗುತ್ತದೆ ಎನ್ನುವ ಭಾವನೆಯಿಂದ ಇಂಥ ಸೂಕ್ತವಾದ ನಿರ್ಣಯವನ್ನು ತೆಗೆದುಕೊಳ್ಳಲಾಗಿತ್ತು. ಆದಾದ ನಂತರ, ನಾವು ೮೨-೮೩ರ ಬಜೆಟ್ಟಿನಲ್ಲಿ ನಾವು ಇದಕ್ಕೋಸ್ಕರ ಸುಮಾರು ೭-೪೦ ಕೋಟಿ ರೂಪಾಯಿಗಳನ್ನು ಖಿಡುಗಡೆ ಮಾಡಿದ್ದೇವೆ. ಹಿಂದೆ ಮಾನ್ಯ ವಿರೇಂದ್ರಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗ ಆ ಭಾಗದಲ್ಲಿ ವಿಶೇಷವಾಗಿ ತಿರುಗಾಡಿ ಅಲ್ಲಿ ಏನು ಏನು ಸಮಸ್ಯೆಗಳು ಇವೆ, ಅವುಗಳಿಗೆ ಯಾವ ರೀತಿ ಕಾರ್ಯಗಳನ್ನು ಮಾಡಬೇಕು ಎನ್ನುವುದನ್ನು ಚೆನ್ನಾಗಿ ಅವರು ಅರಿತುಕೊಂಡಿದ್ದಾರೆ. ಆಗ ಈ ಒಂದು ಭಾಗವನ್ನು ಅಭಿವೃದ್ಧಿ ಮಾಡಬೇಕು ಎಂದು ಒಂದು ಸಬರೇಟ್ ಮಿನಿಸ್ಟ್ರಿ ಆಗುವಂತೆ ಅವರು ಅಭಿಪ್ರಾಯ ಪಟ್ಟು ಈ ಒಂದು ಬೋರ್ಡನ್ನು ರಚನೆ ಮಾಡಲಾಯಿತು. ಈ ಒಂದು ಕಾರಣದಿಂದ ಹಿಂದಿನ ಸರ್ಕಾರ ಸೂಕ್ತ ನಿಲುವನ್ನು ತೆಗೆದುಕೊಂಡು ಸುಮಾರು ೩೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡುವುದಕ್ಕೆ ಸಿದ್ಧವಾಯಿತು ಎನ್ನುವುದನ್ನು ನಾನು ತಮ್ಮ ಮೂಲಕ ಮಾನ್ಯ ಮುಖ್ಯಮಂತ್ರಿಗಳ ಗಮನಕ್ಕೆ ತರಬಯಸುತ್ತೇನೆ. ಇಲ್ಲಿಯವರೆಗೆ ಅಂದರೆ, ೮೫–೮೬ನೆವರೆಗೆ ಸುಮಾರು ೨೫ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿದೆ, ಇದನ್ನು ಹೇಗೆ ಯಾವುದೇ ರೀತಿಯಲ್ಲಿ ಖರ್ಚು ಮಾಡುತ್ತಾರೆಂದು ನಾನು ಕೇಳಬಯಸುತ್ತೇನೆ. ಆವತ್ತು ನಮ್ಮ ಸರ್ಕಾರ ಅಸ್ತಿತ್ವದಲ್ಲಿದ್ದ ತರುಣಕಾಲದಲ್ಲಿ ಜನರ ಮನಸ್ಸನ್ನು ಅರಿತುಕೊಂಡು ಅಲ್ಲಿರತಕ್ಕಂಥ ಪರಿಸ್ಥಿತಿಯನ್ನು ಮನಗಂಡು ಸಮಸ್ಯೆಗಳನ್ನು ಅರಿತುಕೊಂಡು ಆ ಒಂದು ನಿರ್ಣಯವನ್ನು ತೆಗೆದುಕೊಂಡಿತು. ಆದರೆ, ನೀವು ಯಾವ ರೀತಿ ಕೆಲಸ ಮಾಡುತ್ತೀರಿ ? ೩೫ ಕೋಟಿ ರೂಪಾಯಿಗಳನ್ನು ಯಾವ ರೀತಿಯಲ್ಲಿ ಖರ್ಚು ಮಾಡುತ್ತೀರಿ ಎಂಬುದನ್ನು ಹೇಳಬೇಕೆಂದು ಕೇಳಿಕೊಳ್ಳುತ್ತಿದ್ದೇನೆ.

ಶ್ರೀ ಎಸ್. ಭೀಮಣ್ಣ ಖಂಡ್ರೆ. —ಈ ವಿಚಾರದಲ್ಲಿ ಒಂದು ಚರ್ಚೆ ನಡೆದಿತ್ತು, ಅದಕ್ಕೆ ಶ್ರೀಮಾನ್ ಧರ್ಮಸಿಂಗ್‌ರವರು ಅಧ್ಯಕ್ಷರು ಆಗಿದ್ದರು ಎಂದು ಹೇಳಿದರು ಮಾನ್ಯ ದೇವೇಗೌಡರು ಮಾತನಾಡುವಾಗ ಹೈದರಾಬಾದ್ ಕರ್ನಾಟಕ ವಿಮೋಚನಾ ಚಳವಳಿಯಲ್ಲಿ ಇವರು ಭಾಗವಹಿಸಿದ್ದು ಆಗಿದ್ದು ಇಲ್ಲ ಎಂದು ಹೇಳಿದರು. ಇದರಲ್ಲಿ ಯಾವುದು ಸರಿ ಎಂಬುದನ್ನು ತಿಳಿಸಬೇಕು.

ಶ್ರೀ ಎಚ್. ಡಿ. ದೇವೇಗೌಡ.—ಈ ಬಗ್ಗೆ ಯಾವುದೇ ಬೋರ್ಡ್ ಕಾನ್‌ಸ್ಟಿಟ್ಯೂಟ್ ಆಗಿಲ್ಲ. ಹಿಂದಿನ ಮಾನ್ಯ ಮಂತ್ರಿಯವರೇ ಬೋರ್ಡ್ ಕಾನ್‌ಸ್ಟಿಟ್ಯೂಟ್ ಆಗಿದೆ ಎಂಬುದನ್ನು ಡೆಫರ್ ಮಾಡಿದ್ದಾರೆ. ಕ್ಯಾಬಿನೆಟ್ ಡಿಸಿಷನ್ ಒಂದು ಬೋರ್ಡನ್ನು ಕಾನ್‌ಸ್ಟಿಟ್ಯೂಟ್ ಮಾಡಬೇಕೆಂದು ಆದಮೇಲೆ ಅದನ್ನು ಈ ಸದನದ ಮುಂದಿಡಬೇಕು ಎಂದು ತೀರ್ಮಾನ ಆಗಿತ್ತು ಎಂದು ಹೇಳಿದ್ದಾರೆ. ಇಲ್ಲಿಯವರೆಗೆ ೭ ಕೋಟಿ ರೂಪಾಯಿಗಳಷ್ಟು ಖರ್ಚು ಮಾಡಿದ್ದಾರೆ ಎಂದು ಹೇಳಿದ್ದಾರೆ.

ಶ್ರೀ ಎಸ್.ಭೀಮಣ್ಣ ಖಂಡ್ರೆ.—ಈ ಬಗ್ಗೆ ಬೋರ್ಡ್ ರಚನೆ ಆಗಿತ್ತು ಎಂದು ಕಾಣುತ್ತದೆ. ಬೋರ್ಡ್ ಏನು ನಿರ್ಣಯ ಮಾಡಿದೆಯೋ ಆ ನಿರ್ಣಯದ ಪ್ರಕಾರ ಹಣ ಕೊಟ್ಟದ್ದು ಇರಬೇಕು. It is an admitted fact that this Government has sanctioned Rs. 7 crores.

ಶ್ರೀ ಎಚ್.ಡಿ. ದೇವೇಗೌಡ.—ಅದು ಬೋರ್ಡ್ ಅಲ್ಲ, ಕಮಿಟಿಯವರು ರೆಕ್‌ಮೆಂಡ್ ಮಾಡಿದ ಮೇಲೆ ಹಣ ಕೊಟ್ಟದ್ದು ಇದೆ.

ಶ್ರೀ ಎಸ್.ಭೀಮಣ್ಣ ಖಂಡ್ರೆ.—ಹಿಂದ ಬೋರ್ಡ್ ರಚನೆ ಮಾಡಿದ್ದಾರೆ. ಇಲ್ಲಿಯವರೆಗೆ ೭ ಕೋಟಿ ರೂಪಾಯಿಗಳು ಖರ್ಚಾಗಿದೆ ಎಂದು ಹೇಳುತ್ತಿದ್ದಾರೆ. ಆದರೆ ಆ ಹಣ ಖರ್ಚಾಗಿಲ್ಲ. ಬೋರ್ಡ್ ರಚನೆ ಯಾಗಿಲ್ಲ ಎಂದು ಹೇಳುವುದಾದರೆ ಈಗ ನೀವು ರಚನೆ ಮಾಡಿರಿ ಎಂದು ಹೇಳುತ್ತಿದ್ದೇನೆ. ಆಂಧ್ರ ಪ್ರದೇಶದಲ್ಲಿ ಸಹ ಈ ರೀತಿ ರಚನೆ ಮಾಡಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೇ, ಮಾನ್ಯ ಭೀಮಣ್ಣ ಖಂಡ್ರೆಯವರು ಪ್ರತಿ ಮಾತಿಗೂ ಬೆರಳು ತೋರಿಸಿ ಭಯ ಉತ್ಪನ್ನವಾಗುವ ರೀತಿಯಲ್ಲಿ ಮಾತನಾಡುತ್ತಾ ಇರುವುದು ಸರಿಯೇ ಸ್ವಾಮಿ.

ಶ್ರೀ ಭೀಮಣ್ಣ ಖಂಡ್ರೆ.—ಇಲ್ಲಿ ಇರತಕ್ಕಂಥವರೆಲ್ಲರೂ ನನ್ನ ಅಣ್ಣತಮ್ಮಂದಿರ ಹಾಗೆ ಎಂದು ತಿಳಿದುಕೊಂಡು ನಾನು ಮಾತನಾಡುತ್ತಿದ್ದೇನೆ. ಬೇರೆ ಬೇರೆ ರಾಜ್ಯದಲ್ಲಿ ಕೂಡ ಬೋರ್ಡ್ ರಚನೆ ಯಾಗುತ್ತಾ ಇದೆ. ನಮ್ಮ ಹೈದರಾಬಾದ್ ಕರ್ನಾಟಕ ಏರಿಯಾ ನಿಜಾಮನ ಕಾಲದಿಂದಲೂ ಅಭಿವೃದ್ಧಿ ಯಾಗಿಲ್ಲ. ೩೦ ವರ್ಷದ ಹಿಂದೆ ಅಲ್ಲಿನ ಪರಿಸ್ಥಿತಿ ಹೇಗಿತ್ತೋ ಈಗಲೂ ಹಾಗೆಯೇ ಇದೆ. ನಾವು ಈ ಬಗ್ಗೆ ಬಹಳ ಹಿಂದಿನಿಂದಲೂ ಹೋರಾಟ ಮಾಡಿದ್ದೇವೆ. ಅಲ್ಲಿ ಭಾವೈಕ್ಯತೆಯನ್ನು ಉಂಟು ಮಾಡ ಬೇಕೆಂದು ಹೇಳಿ ನಾವು ಹೋರಾಟ ಮಾಡಿದ್ದು ಇದೆ. ಈಗ ಅಲ್ಲಿ ಭಾವೈಕ್ಯತೆ ಇಲ್ಲ. ಅದನ್ನು ಸರಿ ಪಡಿಸದೇ ದುರ್ಲಕ್ಷ ಮಾಡುತ್ತಿದ್ದಾರೆ, ಇದು ಸರಿಯಲ್ಲ. ಈ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ, ಅದಕ್ಕೆ ಬೇರೆ ಒಂದು ಡೆವೆಲಪ್‌ಮೆಂಟ್ ಬೋರ್ಡ್ ರಚನೆ ಮಾಡಬೇಕಾಗಿದೆ. ಮಾನ್ಯ ಮಂತ್ರಿಯವರು ಮಾತನಾಡುವಾಗ ಈಗ ರಾಜ್ಯದಲ್ಲಿ ಪ್ರತಿಯೊಂದು ಜಿಲ್ಲೆಯಲ್ಲೂ ಜಿಲ್ಲಾಪರಿಷತ್ತು ರಚನೆಯಾಗುತ್ತಾ ಇದೆ, ಆದ್ದರಿಂದ ಅದರ ಆವಶ್ಯಕತೆ ಇಲ್ಲ ಎಂದು ಹೇಳಿದರು. ಜಿಲ್ಲಾ ಪರಿಷತ್ತಿನ ಉದ್ದೇಶವೇ ಬೇರೆ, ಇದರ ಉದ್ದೇಶವೇ ಬೇರೆ. ಒಂದು ಕುಟುಂಬದಲ್ಲಿ ಒಬ್ಬ ವ್ಯಕ್ತಿಗೆ ಸಿಕ್ ಆದಾಗ ಅವನಿಗೆ ಬೇರೆ ವ್ಯವಸ್ಥೆ ಮಾಡುವ ಹಾಗೆ ನಮ್ಮ ಈ ಹೈದರಾಬಾದ್ ಕರ್ನಾಟಕ ಏರಿಯಾ ಎಲ್ಲಾ ತರದ ಆ ಭಿವೃದ್ಧಿಯಲ್ಲೂ ಹಿಂದುಳಿದಿರುವ ಕಾರಣ ಅದನ್ನು ಸರ್ವಸಮಾನತೆಯ ಪಂಕ್ತಿಕ್ಕೆ ತರುವ ಸಲುವಾಗಿ ಸ್ಪೆಷಲ್ ಟ್ರೀಟ್‌ಮೆಂಟ್ ಕೊಡಬೇಕು ಎಂದು ಕೇಳಿಕೊಳ್ಳುತ್ತಿದ್ದೇನೆ. ಅಲ್ಲಿ ಳಿ ತಿಂಗಳು ತುಂಬಾ ಮಳೆಯಿರುತ್ತದೆ. ಆಗ ರಸ್ತೆಗಳೆಲ್ಲಾ ಕೆಟ್ಟು ಹೋಗುತ್ತವೆ. ಅದನ್ನು ರಿಪೇರಿ ಮಾಡಿಲ್ಲ. ನಮ್ಮ ಭಾಲ್ಕಿಯಿಂದ ಹುಮ್ನಾ ಬಾದ್‌ಗೆ ಹೋಗುವುದಕ್ಕೆ ಒಂದು ಬಸ್‌ನ ವ್ಯವಸ್ಥೆ ಇಲ್ಲ, ಒಂದು ಸರಿಯಾದ ರಸ್ತೆಯೂ ಇಲ್ಲ, ಇವೆಲ್ಲಾ ಸೌಲಭ್ಯಗಳನ್ನು ಕೊಟ್ಟು ಆ ಏರಿಯಾವನ್ನು ಸರ್ವಸಮಾನತೆಗೆ ತರುವಸಲುವಾಗಿ ೩೫೦ ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ತಯಾರು ಮಾಡಿದ್ದು ಇದೆ. ಮಾನ್ಯ ಮುಖ್ಯಮಂತ್ರಿಯವರು ಮತ್ತು ಮಾನ್ಯ ಮಂತ್ರಿಯವರಾದ ಶ್ರೀಮಾನ್ ದೇವೇಗೌಡರು ಬಹಳ ನ್ಯಾಯಯುತವಾಗಿ ಕೆಲಸ ಮಾಡುವವರು ಇದ್ದಾರೆ. ಅಲ್ಲಿಗೆ ಜಿಲ್ಲಾಪರಿಷತ್ತನ್ನು ರಚನೆ ಮಾಡುತ್ತೇವೆ ಎಂದು ಹೇಳುತ್ತಿದ್ದಾರೆ, ಅದರ ಜೊತೆಗೆ ಈ ಹೈದರಾಬಾದ್-ಕರ್ನಾಟಕ ಏರಿಯಾ ಡೆವೆಲಪ್‌ಮೆಂಟ್ ಸ್ಪಾಚಿಟರಿ ಬೋರ್ಡ್ ಎಂದು ಮಾಡಿ ಈಗಾಗಲೇ ಏನೊಂದು ೩೫೦ ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ತಯಾರು ಮಾಡಿದ್ದಾರೆ ಅದರಂತೆ ಪ್ರತಿವರ್ಷ ೪೫ ಕೋಟಿ ರೂಪಾಯಿಗಳನ್ನು ಅದಕ್ಕೆ ಕೊಟ್ಟು ಆ

ಏರಿಯಾವನ್ನು ಮುಂದಕ್ಕೆ ತರುವುದಕ್ಕೆ ಪ್ರಯತ್ನ ಮಾಡುತ್ತಾರೆಂದು ನಾನು ನಂಬಿದ್ದೇನೆ. ಇದರ ಬಗ್ಗೆ ಅವರು ತೀವ್ರವಾಗಿ ವಿಚಾರ ಮಾಡಬೇಕು ಎಂದು ಹೇಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಅಧ್ಯಕ್ಷರೇ...

ಶ್ರೀ ರಾಮಕೃಷ್ಣ ಹೆಗಡೆ.—ನಾನು ಈ ಬಗ್ಗೆ ಉತ್ತರವನ್ನು ಕೊಡುತ್ತೇನೆ, ಆದಾದ ಮೇಲೆ ನೀವು ಪ್ರಶ್ನೆಯನ್ನು ಕೇಳಬಹುದು.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.— ತಾವು ಈ ಬಗ್ಗೆ ನಮ್ಮನ್ನು ಕನ್‌ವಿನ್ಸ್ ಮಾಡುತ್ತೀರಿ, ಅದು ನಮಗೆ ಗೊತ್ತಿದೆ. ಆದರೂ ಕೂಡ ನಾನು ಈ ಬಗ್ಗೆ ಹೇಳಬೇಕಾಗಿರತಕ್ಕಂಥ ವಿಚಾರಗಳನ್ನು ಈ ಸಭೆಗೆ ಹೇಳಬೇಕಾಗಿದೆ. ಹೈದರಾಬಾದ್–ಕರ್ನಾಟಕ ಏರಿಯಾ ಡೆವಲಪ್‌ಮೆಂಟ್ ಕಮಿಟಿ ಎಂದು ಹೇಳಿ ಒಂದು ಕಮಿಟಿ ರಚನೆಯಾದಮೇಲೆ ಮಾನ್ಯ ಧರ್ಮಸಿಂಗ್‌ರವರು ಅದರ ಅಧ್ಯಕ್ಷರಾಗಿದ್ದರು, ಈ ಬಗ್ಗೆ ಒಂದು ರಿಪೋರ್ಟನ್ನು ಅವರು ಸರ್ಕಾರಕ್ಕೆ ಕೊಟ್ಟಿದ್ದಾರೆ. ಈಗಾಗಲೇ ಅವರು ಹೇಳಿದ ಹಾಗೆ ಆ ರಿಪೋರ್ಟಿನಲ್ಲಿ 'ಇದು ಅತ್ಯಂತ ಹಿಂದುಳಿದ ಭಾಗ, ಈ ಭಾಗದ ಅಭಿವೃದ್ಧಿಗಾಗಿ ಹೆಚ್ಚಿನ ಹಣವನ್ನು ಕೊಡಬೇಕು ಮತ್ತು ಅದರ ಅಭಿವೃದ್ಧಿಗಾಗಿ ಸುಮಾರು ೩೫೦ ಕೋಟಿ ರೂಪಾಯಿಗಳಷ್ಟು ಹಣ ಬೇಕಾಗುತ್ತದೆ.' ಎಂದು ಹೇಳಿ ಒಂದು ಶಿಫಾರಸ್ಸನ್ನೂ ಕೂಡ ಮಾಡಿದ್ದಾರೆ. ರೋಡ್ ಅಂಡ್ ಕಮ್ಯುನಿಕೇಷನ್ಸ್, ಹೆಲ್ತ್, ಮೈನರ್ ಇರಿಗೇಷನ್, ಅನಿಮಲ್ ಹಸ್ಬೆಂಡರಿ, ಸೆರಿಕಲ್ಚರ್, ಅಗ್ರಿಕಲ್ಚರ್ ಡೆವೆಲಪ್‌ಮೆಂಟ್ ಮತ್ತು ಮುನಿಸಿಪಲ್ ಏರಿಯಾ ಡೆವಲಪ್‌ಮೆಂಟ್–ಹೀಗೆ ೧೦ ಸೆಕ್ಟಾರ್‌ಗೆ ಸುಮಾರು ೩೫೦ ಕೋಟಿ ರೂಪಾಯಿಗಳನ್ನು ೧೦ ವರ್ಷಗಳಲ್ಲಿ ಒದಗಿಸಿಕೊಡಬೇಕು ಎನ್ನತಕ್ಕಂಥ ಒಂದು ರಿಪೋರ್ಟನ್ನು ಅವರು ಕೊಟ್ಟಿದ್ದಾರೆ. ನಾನು ಈ ಸಂದರ್ಭದಲ್ಲಿ ಒಂದು ಮಾತನ್ನು ಒಪ್ಪಿಕೊಳ್ಳುತ್ತೇನೆ, ಈ ಬಗ್ಗೆ ಒಂದು ಕಮಿಟಿ ರಚನೆಯಾಯಿತು, ಆದರೆ ಇದು ಸ್ಯಾಚ್ಯುಟರಿ ಬಾಡಿ ಅಲ್ಲ, ನಮ್ಮ ಕ್ಯಾಬಿನೆಟ್ ವೀಟಿಂಗ್‌ನಲ್ಲಿ, ಅದನ್ನು ಸ್ಯಾಚ್ಯುಟರಿ ಬಾಡಿಯಾಗಿ ಒಪ್ಪಿಕೊಂಡು,–ಆ ಸ್ಯಾಚ್ಯುಟರಿ ಬಾಡಿಯಿಂದ ಈ ಹಣವನ್ನು ಖರ್ಚು ಮಾಡಬೇಕೆಂದು ನಾವು ತೀರ್ಮಾನ ಮಾಡಲಿಲ್ಲ. ಆದರೆ ಈ ಬಗ್ಗೆ ೩೫೦ ಕೋಟಿ ರೂಪಾಯಿಗಳಷ್ಟು ಹಣವನ್ನು ಖರ್ಚು ಮಾಡಬೇಕೆಂದು ಹೇಳಿ ಕ್ಯಾಬಿನೆಟ್ ವೀಟಿಂಗ್‌ನಲ್ಲಿ ನಾವು ತೀರ್ಮಾನ ತೆಗೆದುಕೊಂಡಿದ್ದೇವೆ. ಆ ತೀರ್ಮಾನಕ್ಕೆ ಅನುಗುಣವಾಗಿ ಹೋದಸಲ ಸುಮಾರು ೧೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕೆಂದು ಹೇಳಿ ನಾವು ತೆಗೆದು ಇಟ್ಟಿದ್ದೆವು. ಆ ೧೦ ಕೋಟಿ ರೂಪಾಯಿಗಳನ್ನು ವಿವಿಧ ಖಾತೆಗಳ ಮುಖಾಂತರ ಖರ್ಚು ಮಾಡಬೇಕೆಂದು ತೀರ್ಮಾನ ಮಾಡಿದ್ದೆವು. ಹೈದರಾಬಾದ್ ಕರ್ನಾಟಕ ಏರಿಯಾ ಡೆವಲಪ್‌ಮೆಂಟ್ ಬೋರ್ಡ್ ಅಂತ ಏನೂ ಇರಲಿಲ್ಲ, ಆದರೆ ಹೈದರಾಬಾದ್–ಕರ್ನಾಟಕ ಏರಿಯಾ ಡೆವೆಲಪ್‌ಮೆಂಟ್ ಕಮಿಟಿ ಎಂದು ಇತ್ತು. ಈ ಕಮಿಟಿ ಸ್ಯಾಚ್ಯುಟರಿ ಬೋರ್ಡ್ ಆಥವಾ ಬಾಡಿ ಆಗುವವರೆಗೆ ೧೦ ಕೋಟಿ ರೂಪಾಯಿಗಳನ್ನು ರೋಡ್ ಅಂಡ್ ಕಮ್ಯುನಿಕೇಷನ್ ಡಿಪಾರ್ಟ್‌ಮೆಂಟ್, ಹೆಲ್ತ್ ಡಿಪಾರ್ಟ್‌ಮೆಂಟ್, ಎಜುಕೇಷನ್ ಡಿಪಾರ್ಟ್‌ಮೆಂಟ್, ಫಾರೆಸ್ಟ್ ಡಿಪಾರ್ಟ್‌ಮೆಂಟ್ ಹಾಗೂ ಇನ್ನಿತರ ಡಿಪಾರ್ಟ್‌ಮೆಂಟ್‌ಗಳ ಮುಖಾಂತರ ಆಡಿಷನಲ್ ಗ್ರಾಂಟ್ಸ್ ಕೊಟ್ಟು ಖರ್ಚು ಮಾಡಬೇಕೆಂದು ಕೊಟ್ಟಿದ್ದು ಇದೆ. ಹಾಗೆಂದ ಮಾತ್ರಕ್ಕೆ ಮುಂದೆ ಸ್ಯಾಚ್ಯುಟರಿ ಬೋರ್ಡ್ ರಚನೆ ಮಾಡಬಾರದು ಎಂದು ಅರ್ಥವಲ್ಲ. ಇಂತಹ ಬೇಡಿಕೆಗಳು ಬಂದಾಗ ಬೇರೆ ಬೇರೆ ರಾಜ್ಯಗಳಲ್ಲಿ ಈ ರೀತಿಯಾದ ಡೆವೆಲಪ್‌ಮೆಂಟ್ ಬೋರ್ಡ್‌ಗಳನ್ನು ಮಾಡಿದ್ದಾರೆ. ಈ ರೀತಿಯ ಬೋರ್ಡ್ ಮರಾಠ್‌ವಾಡ್‌ನಲ್ಲಿದೆ, ವಿದರ್ಭದಲ್ಲಿದೆ, ಉತ್ತರಪ್ರದೇಶದಲ್ಲಿದೆ ವೆಸ್ಟ್‌ಬೆಂಗಾಲ್‌ನಲ್ಲಿದೆ. ಈ ಬಗ್ಗೆ ತಮ್ಮಲ್ಲಿ ರಿಪೋರ್ಟ್ ಇರಬಹುದು. ಎಲ್ಲೆಲ್ಲಿ ಬೋರ್ಡ್ ಕಾನ್‌ಸ್ಟಿಟ್ಯೂಟ್ ಮಾಡಿದ್ದಾರೆ ಎಂಬ ಬಗ್ಗೆ ಅವರು ಒಂದು ರಿಪೋರ್ಟ್ ಕೊಟ್ಟಿದ್ದಾರೆ ಮತ್ತು ಬೋರ್ಡ್‌ಗಳ ಹೆಸರುಗಳನ್ನೂ ಕೂಡ ಅದರಲ್ಲಿ ಕೊಟ್ಟಿದ್ದಾರೆ. ಸ್ಯಾಚ್ಯುಟರಿ ಬೋರ್ಡ್ ಮಾಡಬಹುದು ಎನ್ನತಕ್ಕಂಥ ವಿಚಾರವನ್ನು ಅವರು ಅದರಲ್ಲಿ ಹೇಳಿದ್ದಾರೆ. ಈ ಬಗ್ಗೆ ಮಾನ್ಯ ದೇವೇಗೌಡರನ್ನು ಪ್ರಶ್ನೆ ಕೇಳಿದಾಗ ಅವರು ಏನು ಹೇಳದರು ಎಂದರೆ, ಇದನ್ನು ಸ್ಯಾಚ್ಯುಟರಿ ಬೋರ್ಡ್ ಆಗಿ ಮಾಡುವುದಕ್ಕಾಗುವುದಿಲ್ಲ. ಆದರೆ ಆ ಹಿಂದುಳಿದಂತಹ ಭಾಗಕ್ಕೆ ಹಣದ ಕೊರತೆ ಇದ್ದರೆ ಸ್ವಲ್ಪಮಟ್ಟಿಗೆ ನಾನು ಸಹಾಯ ಮಾಡಬಹುದು ಎಂದು ಹೇಳಿದ್ದಾರೆ. ತಮಗೂ ಕೂಡ ಇದರ ಬಗ್ಗೆ ಹೆಚ್ಚಿನ ಅನುಭವವಿದೆ. ಆದು ಹಿಂದುಳಿದಂಥ ಭಾಗ ಇದೆ. ಕೇವಲ ನಿಮ್ಮ ಕಾಲದಲ್ಲಿ ಆಗಿದೆ ಎಂದು ಅಲ್ಲ, ಆದು ಸುಮಾರು ನೈಜಾಮನ ಕಾಲದಿಂದಲೂ ನೆಗ್ಲೆಕ್ಟೆಡ್ ಇದೆ. ಇಂದೂ ಕೂಡ ಹಾಗೆಯೇ ನೋಡಿಕೊಳ್ಳಬೇಕ

ಎನ್ನತಕ್ಕ ನೀತಿಯನ್ನು ನಾವು ತಳಬಾರದು. ಅದಕ್ಕೆ ಹಿಂದೆ ಮಾನ್ಯ ಧರ್ಮಸಿಂಗ್‌ರವರು ಏನು ವರದಿಯನ್ನು ಕೊಟ್ಟಿದ್ದಾರೆ, ಆ ವರದಿಯಲ್ಲಿ ೩೫೦ ಕೋಟಿ ರೂಪಾಯಿಗಳನ್ನು ಶಿಫಾರಸು ಮಾಡಿದ್ದಾರೆ ಅದನ್ನು ಯಾವರೀತಿ ಖರ್ಚು ಮಾಡಬೇಕು ಎಂದು ತಾವು ಪ್ರಯತ್ನ ಮಾಡುತ್ತಾ ಇದ್ದೀರಿ? ಮತ್ತು ಈಗ ಹೋದಸಲ ಕೊಟ್ಟಂಥ ೧೦ ಕೋಟಿ ರೂಪಾಯಿಗಳನ್ನು ಯಾವರೀತಿ ಖರ್ಚು ಮಾಡಿದಿರಿ, ಅದರಲ್ಲಿ ಎಷ್ಟು ಹಣ ಲ್ಯಾಪ್ಸ್ ಆಗಿದೆ, ಎಷ್ಟು ಹಣ ಉಳಿದಿದೆ ಎನ್ನುವುದನ್ನು ಹೇಳಬೇಕು. ಖಿಡಾಖಂಡಿತವಾಗಿ ಸ್ಪಾಟ್‌ಚುಟರಿ ಬೋರ್ಡ್ ಮಾಡುತ್ತೀರೇನೋ ಗೊತ್ತಿಲ್ಲ. ಡಿಪಾರ್ಟ್‌ಮೆಂಟ್‌ನವರಿಗೆ ಹೆಚ್ಚು ಹಣವನ್ನು ಕೊಟ್ಟು ಮಾಡುತ್ತೀರೋ ಆ ನೀತಿಯನ್ನು ಸ್ಪಷ್ಟಪಡಿಸಬೇಕು. ಒಂದೇ ಒಂದು ಉದಾಹರಣೆ ಹೇಳುತ್ತೇನೆ. The average road length per 100 Sq. Mtrs. of area in the State is 51. In Gulbarga division it is only 34. ಹೀಗೆಯೇ ಹೆಲ್ತ್ ಇದೆ, ಎಜುಕೇಷನ್ ಇದೆ, ಮುಂತಾದುವು ಇದೆ. ಇಷ್ಟು ವ್ಯತ್ಯಾಸವಿದೆ. ಈ ವ್ಯತ್ಯಾಸವನ್ನು ಕಡಿಮೆ ಮಾಡ ಬೇಕಾದರೆ ಒಂದೇ ಒಂದು ಮಾರ್ಗ ಇದು. ಸ್ಪಾಟ್‌ಚುಟರಿ ಬೋರ್ಡ್ ಮಾಡಿ ೩೫೦ ಕೋಟಿ ರೂಪಾಯಿ ಗಳನ್ನು ೧೦ ವರ್ಷಗಳಲ್ಲಿ ಕೊಟ್ಟಾಗ ಮಾತ್ರ ಈ ಅಂತರವನ್ನು ಕಡಿಮೆ ಮಾಡುವುದಕ್ಕೆ ಸಾಧ್ಯವಾಗು ತ್ತದೆಯೇ ಹೊರತಾಗಿ ಕೇವಲ ಡಿಪಾರ್ಟ್‌ಮೆಂಟ್‌ಗೆ ವಹಿಸಿಕೊಡುವುದಾದರೆ ಹಣ ಲ್ಯಾಪ್ಸ್ ಆಗುತ್ತದೆ. ಆಪ್ಪರ್ ಕೃಷ್ಣ ಬಗ್ಗೆ ತಾವು ಹೇಳಬಹುದು. ಆಪ್ಪರ್ ಕೃಷ್ಣ ಪ್ರಾಜೆಕ್ಟ್‌ಗೆ ಹೋದಸಲ ೪೦-೫೦ ಕೋಟಿ ರೂಪಾಯಿಗಳನ್ನು ಅಲಾಟ್ ಮಾಡಿದರೂ ಲ್ಯಾಪ್ಸ್ ಆಯಿತು. ತಾವು ಒಂದು ಸ್ಪಾಟ್‌ಚುಟರಿ ಬೋರ್ಡ್ ಮಾಡಿ. ಡಿ.ಆರ್.ಡಿ.ಎಸ್.ನಲ್ಲಿ ಫಂಡ್ಸ್ ಇದ್ದರೆ ಲ್ಯಾಪ್ಸ್ ಆಗುವುದಿಲ್ಲ. ಎಷ್ಟು ಹಣ ಕೊಟ್ಟಗೂ ಕೂಡ ಮುಂದಿನ ವರ್ಷ ಖರ್ಚು ಮಾಡಬಹುದು. ಇವತ್ತಿನ ದಿವಸ ಒಂದು ಸ್ಪಾಟ್‌ಚುಟರಿ ಬೋರ್ಡ್ ಮಾಡಿದರೆ ಹಣ ಕೂಡ ಉಳಿಯುತ್ತದೆ. ಇದರ ಬಗ್ಗೆ ಹೆಚ್ಚಿನ ಆಸಕ್ತಿ ವಹಿಸಿ ಕೆಲಸ ಮಾಡು ವುದಕ್ಕೆ ಆಗುವುದಿಲ್ಲವೇ. ಇದರ ಬಗ್ಗೆ ತಮ್ಮ ನೀತಿಯನ್ನು ಸ್ಪಷ್ಟಪಡಿಸಬೇಕು. ಶ್ರೀಮಾನ್ ಧರ್ಮಸಿಂಗ್‌ರವರ ಸಮಿತಿ ವರದಿ ಏನಿದೆ ಅದನ್ನು ಒಪ್ಪಿಕೊಂಡು ಅದನ್ನು ಯಾವರೀತಿ ಜಾರಿಯಲ್ಲಿ ತರುತ್ತೀರಿ ಎನ್ನುವುದರ ಬಗ್ಗೆ ಸ್ಪಷ್ಟವಾಗಿ ತಿಳಿಸಬೇಕು.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಅಧ್ಯಕ್ಷರೆ, ನನ್ನ ಪ್ರಾರ್ಥನೆ ಏನೆಂದರೆ, ಇದರ ಹಿನ್ನೆಲೆ ಏನಿದೆ ಅದನ್ನು ಅರಿಕೆ ಮಾಡಿಕೊಂಡ ಮೇಲೆ ಮಾನ್ಯ ಮುಖ್ಯಮಂತ್ರಿಗಳು ಉತ್ತರ ಹೇಳಿದರೆ ಅನುಕೂಲವಾಗುತ್ತದೆ. ಹಿಂದಿನ ಸರ್ಕಾರ ಎಲ್ಲೆಲ್ಲಿ ಅವರ ಮೇಲೆ ಪ್ರಭಾವ ತರುವುದಕ್ಕೆ ಸಮರ್ಥ ರಿದ್ದಾರೋ ಅಂತಹ ಕಡೆ ಪೂರ್ಣ ಮನವೊಲಿದು ಹಣಕಾಸನ ಪರಿಸ್ಥಿತಿಯನ್ನು ಗಮನಕ್ಕೆ ತೆಗೆದುಕೊಳ್ಳದೆ ಹಣವನ್ನು ಮಂಜೂರು ಮಾಡುತ್ತಾ ಬಂದಿದ್ದಾರೆ. ಶಿವಮೊಗ್ಗ ಜಿಲ್ಲೆಯಲ್ಲಿ ಮಂತ್ರಿಮಂಡಲದ ಸಭೆ ಆದರೆ ಒಂದು ಮಾತು ಕೊಡುವುದು, ಇನ್ನೊಂದು ಜಿಲ್ಲೆಯಲ್ಲಿ ಸಭೆಯಾದರೆ ಇನ್ನೊಂದು ಮಾತು ಕೊಡುವುದು.

(ಗೊಂದಲ)

ಶ್ರೀ ಧರ್ಮಸಿಂಗ್.—ಅರ್ಧ ಗಂಟೆ ಚರ್ಚೆಯಲ್ಲಿ ಭಾಗವಹಿಸಿ ಮಾನ್ಯ ಸದಸ್ಯರು ಮಾತನಾಡು ತ್ತಿದ್ದಾರೆ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಅವರ ಹಿತವನ್ನು ಹೇಳುತ್ತಾ ಇದ್ದೇನೆ.

ಶ್ರೀ ಎಂ, ಮಲ್ಲಿಕಾರ್ಜುನ ಖಾರ್ಗೆ.—ಈ ವರದಿಯನ್ನು ಆಧಾರವಾಗಿಟ್ಟುಕೊಂಡು ಹೇಳುತ್ತಿ ದ್ದೇವೆ. ಹಿಂದಿನ ಸರ್ಕಾರ ಇರಲಿ ೨೦ ವರ್ಷಗಳ ಹಿಂದಿನ ಸರ್ಕಾರವಿರಲಿ, ಯಾವುದೇ ಸರ್ಕಾರವಿರಲಿ, ಈ ಗವರ್ನಮೆಂಟ್ ಡಾಕ್ಯುಮೆಂಟನ್ನು ಆಧಾರವಾಗಿಟ್ಟುಕೊಂಡು ನಾವು ಮಾತನಾಡುವಾಗ ಬ್ಯಾಕ್‌ಗ್ರೌಂಡ್ ಇದೆ ಅಂದರೆ, ಬ್ಯಾಕ್‌ಗ್ರೌಂಡ್ ಏನೂ ಆಗಿಲ್ಲ.

ಉಪಾಧ್ಯಕ್ಷರು.—ಮಾನ್ಯ ಖಾರ್ಗೆಯವರೆ, ತಮ್ಮ ಅಭಿಪ್ರಾಯವನ್ನು ಹೇಳಿದ್ದೀರಿ, ಈಗ ಅವರ ಅಭಿಪ್ರಾಯವನ್ನು ಹೇಳಲಿ.

(ಗೊಂದಲ)

ಶ್ರೀ ಎನ್. ಹುಚ್ಚಮಾಸ್ತಿಗೌಡ.—ರಾಜ್ಯದಲ್ಲಿ ಮಲೆನಾಡು ಅಭಿವೃದ್ಧಿ ಸಮಿತಿ ಎಂದು ಮಾಡಿದರು. ಅದಕ್ಕೆ ಕೋಟ್ಯಾಂತರ ರೂಪಾಯಿಗಳನ್ನು ಖರ್ಚು ಮಾಡಬೇಕಾಗಿತ್ತು, ಮಾಡಲಿಲ್ಲ. ತೀರ ಬರಗಾಲದಿಂದ ವರ್ಷೇ ವರ್ಷೇ ಕಷ್ಟಪಡುತ್ತಿದ್ದಾರೋ ಅಂತಹ ಪ್ರದೇಶದವರ ಅಭಿವೃದ್ಧಿಗೋಸ್ಕರ ಯಾವ ಕಾರ್ಯಕ್ರಮವನ್ನೂ ಕೈಗೊಳ್ಳಲಿಲ್ಲ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನೀವು ಮಾಡಿಸಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಪರಿಸ್ಥಿತಿ ಇರುವುದರಿಂದ, ಮತ್ತೆ ರಾಜ್ಯದ ಆರ್ಥಿಕ ಪರಿಸ್ಥಿತಿಯನ್ನು ಸರಿದೂಗಿಸಬೇಕಾದರೆ.....

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ಮಾನ್ಯ ಮುಖ್ಯಮಂತ್ರಿಗಳಿದ್ದಾರೆ, ಅವರು ಉತ್ತರ ಕೊಡುತ್ತಾರೆ, ಇವರ ಉತ್ತರ ನಮಗೆ ಬೇಕಾಗಿಲ್ಲ. ಅರ್ಧ ಗಂಟೆ ಚರ್ಚೆಯಲ್ಲಿ ಭಾಗವಹಿಸಿ ಮಾತನಾಡುವುದಾದರೆ ಮಾತನಾಡಲಿ.

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈ ಪರಿಸ್ಥಿತಿ ಇರುವುದರಿಂದ ನಮ್ಮ ಮಾನ್ಯ ಮುಖ್ಯಮಂತ್ರಿಗಳಲ್ಲಿ ನನ್ನ ವಿನಂತಿ ಏನೆಂದರೆ, ಹಿಂದೆ ಯಾರು ಏನೇ ತೀರ್ಮಾನ ಮಾಡಿರಲಿ. ಇವತ್ತಿನ ದಿವಸ ರಾಜ್ಯದ ಹಣಕಾಸಿನ ಪರಿಸ್ಥಿತಿ ಹದಗೆಟ್ಟಿರುವುದರಿಂದ ಅನೇಕ ರೀತಿ ತೊಂದರೆಯಲ್ಲಿರುವ ಪ್ರದೇಶಗಳನ್ನು ಮತ್ತು ಹಿಂದೆ ಬಿದ್ದಿರತಕ್ಕ ಪ್ರದೆ ಶಗಳನ್ನು ಗಮನದಲ್ಲಿಟ್ಟುಕೊಂಡು ಹಣಕಾಸನ್ನು ಎಲ್ಲೆಲ್ಲಿ ಎಷ್ಟೆಷ್ಟು ಕೊಡಬೇಕೋ ನೋಡಿಕೊಂಡು—

ಶ್ರೀ ಧರ್ಮಸಿಂಗ್.—ಇಂತಹ ಮಾತುಗಳಿಂದ ದೇಶ ಹಾಳಾಗುತ್ತಿದೆ.

(ಗೊಂದಲ)

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಯಾವ ಯಾವ ಪ್ರದೇಶಗಳು ಹಿಂದೆ ಬಿದ್ದಿವೆ ಅವುಗಳನ್ನು ಸರಿಸಮಾನವಾದಂಥ ದೃಷ್ಟಿಯಲ್ಲಿಟ್ಟುಕೊಂಡು ಮಾಡಬೇಕಾಗುತ್ತದೆ. ಹಿಂದೆ ಪ್ರಭಾವಕ್ಕೆ ಒಳಗಾಗಿ ತೀರ್ಮಾನ ತೆಗೆದುಕೊಂಡಂತೆ ಆ ರೀತಿ ಪ್ರಭಾವಕ್ಕೆ ಒಳಗಾಗಬಾರದು ಎನ್ನುವುದು ನನ್ನ ಸೂಚನೆ.

ಶ್ರೀ ಎಂ. ಮಲ್ಲಿಕಾರ್ಜುನ ಖಾರ್ಗೆ.—ನಾವು ಪ್ರಭಾವ ಬೀರುತ್ತಾ ಇಲ್ಲ.

ಶ್ರೀ ಎಸ್. ಬಂಗಾರಪ್ಪ.—ತಪ್ಪರು ಏಕೆ ಆ ರೀತಿ ಹೇಳಿದರೂ ಎಂದು ಅರ್ಥವಾಯಿತೇ ನಿಮಗೆ, ನಮಗಂತೂ ಅರ್ಥವಾಯಿತು.

ಶ್ರೀ ರಾಮಕೃಷ್ಣ ಹೆಗಡೆ.—ನಮಗೆ ಅರ್ಥವಾಯಿತು. ನೀವು ಯಾವ ರೀತಿ ಅರ್ಥಮಾಡಿಕೊಂಡಿದ್ದೀರೋ ಗೊತ್ತಿಲ್ಲ.

ಶ್ರೀ ಎಂ. ವೀರಪ್ಪ ಮೊಯಿಲಿ.—ನಿಮಗೂ ಅರ್ಥ ಆಗಿರಬೇಕು ಅಂದರೆ ಏನೋ ಇದೆ ನಿಮ್ಮಲ್ಲಿ.

ಶ್ರೀ ರಾಮಕೃಷ್ಣ ಹೆಗಡೆ.— ಮಾನ್ಯ ಅಧ್ಯಕ್ಷರೇ, ಹೈದರಾಬಾದ್ ಕರ್ನಾಟಕದ ಮೂರು ಜಿಲ್ಲೆಗಳು ಮತ್ತು ಬಳ್ಳಾರಿಯ ಈ ಭಾಗ ಹಿಂದುಳಿದಿವೆ ಎಂದು ಹೇಳುವುದರಲ್ಲಿ ಭಿನ್ನಾಭಿಪ್ರಾಯ ಆಗುವುದಕ್ಕೆ ಸಾಧ್ಯವಿಲ್ಲ. ಆದರೆ ಈ ವಿಭಾಗದ ಕೆಲವು ಪ್ರದೇಶಗಳಷ್ಟೇ ಅಥವಾ ಅದಕ್ಕಿಂತಲೂ ಹೆಚ್ಚು ನಮ್ಮ ರಾಜ್ಯದ ಬೇರೆ ಬೇರೆ ಜಿಲ್ಲೆಗಳ ಕೆಲವು ಭಾಗ ಹಿಂದುಳಿದಿವೆ ಎಂದು ಹೇಳುವುದಕ್ಕೂ ಭಿನ್ನಾಭಿಪ್ರಾಯ ಇಲ್ಲ. ಉದಾಹರಣೆಗೆ ಹೇಳುವುದಾದರೆ, ಬಿದರ್, ಗುಲ್ಬರ್ಗ, ರಾಯಚೂರು ಈ ಮೂರು ಜಿಲ್ಲೆಗಳಲ್ಲಿ ಸರಾಸರಿ ಪ್ರತಿ ವ್ಯಕ್ತಿಯ ಪರಮಾಸ ಬಿಜಾಪುರ, ಕೊಡಗಿನ ಮತ್ತು ತುಮಕೂರು ಈ ಮೂರು ಜಿಲೆಗಳಲ್ಲಿ ಸರಾಸರಿ ವ್ಯಕ್ತಿಯ ಪರಮಾನಕ್ಕಿಂತ ಹೆಚ್ಚು ಇದೆ. ಬಳ್ಳಾರಿಯಲ್ಲಿ ತುಸು ಹೆಚ್ಚು ಕಡಿಮೆ ಸರಿಸಮಾನವಾಗಿದೆ ಈಗ ಹೈದರಾಬಾದ್ ಅಭಿವೃದ್ಧಿ ಮಂಡಲಿ ಒಗ್ಗೆ ಕೆಲಸ ಜರ್ಚೆಯಾಗುತ್ತಿದೆ ಇದರ ಹಿನ್ನೆಲೆ ಇಷ್ಟು. ರಿಜರ್ವೇಷನ್ ಇರಬಹುದು ಮೀಸಲಾತಿ ಮೇರೆ ತೀರ್ಮಾನಗಳು ಹಿಂದಿನ ಸರ್ಕಾರ ಹಿಂದು ನಿರ್ಣಯದ ಮೇರೆಗೆ ಎಂದು ನಾನು ಸಂಬುತ್ತೇನೆ.

5-30 ಪಿ.ಎಂ.

ಶ್ರೀ ಧರ್ಮಸಿಂಗ್‌ರವರ ಅಧ್ಯಕ್ಷತೆಯಲ್ಲಿ ಒಂದು ಕಮಿಟಿಯನ್ನು ಮಾಡಿದ್ದರು. ಆದರಲ್ಲಿ ಕೆಲವು ಶಾಸಕರು ಮತ್ತು ಪಾರ್ಲಿಮೆಂಟ್ ಸದಸ್ಯರು ಇದ್ದರು. ೧೯೮೦ನೇ ಮೇ ತಿಂಗಳಿಂದ ೧೯೮೧ನೇ ಇಸ್ವಿ ಮೇ ತಿಂಗಳವರೆಗೆ ಏನು ಮಾಡಿದರು ಎಂಬುದು ಗೊತ್ತಿಲ್ಲ. ಆಗ ಇದ್ದಕ್ಕಿದ್ದ ಹಾಗೆ ೧೯೮೧ನೇ ಇಸ್ವಿ ಮೇ ತಿಂಗಳಲ್ಲಿ ಸರ್ಕಾರ ಮತ್ತೊಂದು ಕಮಿಟಿಯನ್ನು ನೇಮಕ ಮಾಡಿತು. ಆದಕ್ಕೆ ಮಾನ್ಯ ಶ್ರೀ ಧರ್ಮಸಿಂಗ್‌ರವರು ಅಧ್ಯಕ್ಷರು ಮತ್ತು ಅದರಲ್ಲಿ ಕೇವಲ ೨ ಪಾರ್ಲಿಮೆಂಟ್ ಸದಸ್ಯರು ಮಂತ್ತು ೭ ಜನ ಶಾಸಕರನ್ನು ಹಾಕಿದ್ದಾರೆ. ಈ ಸಮಿತಿ ಸರ್ಕಾರಕ್ಕೆ ಒಂದು ವರದಿಯನ್ನು ಒಪ್ಪಿಸಿದ್ದಾರೆ. ಆದರೆ ನನಗೆ ಸ್ವಲ್ಪ ಆಶ್ಚರ್ಯ...

ಶ್ರೀ ಧರ್ಮಸಿಂಗ್.—ಎರಡನೆಯ ಕಮಿಟಿ ಎಂದರೆ ಅದು ಸಬ್ ಕಮಿಟಿ.

ಶ್ರೀ ರಾಮಕೃಷ್ಣ ಹೆಗಡೆ.—ಸಬ್ ಕಮಿಟಿನೋ ಮತ್ತೊಂದು ಆದರೆ ಎರಡನೆಯ ಕಮಿಟಿಯನ್ನು ನೇಮಕ ಮಾಡಿರುವ ಬಗ್ಗೆ ಆಜ್ಞೆ ಇದೆ. ಸರ್ಕಾರದವರೇ ಈ ಕಮಿಟಿಯನ್ನು ನೇಮಿಸಿದ್ದಾರೆ ಅಂದರೆ ಇದು ಯಾವ ಕಮಿಟಿಯಾಗುತ್ತದೆಂಬುದನ್ನು ತಾವೇ ಅರ್ಥ ಮಾಡಿಕೊಳ್ಳಬಹುದು. ಆಮೇಲೆ ಆ ಕಮಿಟಿಯವರು ಒಂದು ವರದಿಯನ್ನು ತಯಾರು ಮಾಡಿದರು.

ಶ್ರೀ ಧರ್ಮಸಿಂಗ್.—ಅಧ್ಯಕ್ಷರೇ, ಇಲ್ಲಿ ವಿಷಯಾಂತರವಾಗುತ್ತಿದೆ ಅದರ ಬಗ್ಗೆ ನಾನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಅದು ಬೇರೆ ಕಮಿಟಿಯಲ್ಲ ಸಬ್ ಕಮಿಟಿಯನ್ನೇ ಮಾಡಿದ್ದು.

ಶ್ರೀ ರಾಮಕೃಷ್ಣ ಹೆಗಡೆ.—೧೯೮೦ನೇ ಮೇ ತಿಂಗಳಿಂದ ೧೯೮೧ನೇ ಮೇ ತಿಂಗಳವರೆಗೆ ಆ ಕಮಿಟಿ ಏನು ಮಾಡಿತು ಎಂಬುದು ಗೊತ್ತಿಲ್ಲ. ಆದರ ಚಟುವಟಿಕೆ ಏನೆಂಬುದೇ ಗೊತ್ತಾಗಲಿಲ್ಲ. ಆನಂತರ ಮತ್ತೊಂದು ಕಮಿಟಿ ಮಾಡಿದ್ದಾರೆ ಅದನ್ನು ಅವರು ಸಬ್ ಕಮಿಟಿ ಎಂದು ಹೇಳುತ್ತಿದ್ದಾರೆ ಆದರೆ ಎರಡನೆಯ ಕಮಿಟಿ ಮಾಡಿರುವ ಬಗ್ಗೆ ಸರ್ಕಾರಿ ಆಜ್ಞೆ ಕ್ಲಿಯರ್ ಆಗಿದೆ. ಅದು ಹೇಗೋಇರಲ್ಲಿ ಅದು ಮಹತ್ವದ್ದು ಅಲ್ಲ. ಆ ಕಮಿಟಿಯಲ್ಲಿ ಪ್ಲಾನಿಂಗ್ ಡಿಪಾರ್ಟ್‌ಮೆಂಟಿನವರು ಆಗಲೀ ಆರ್ಥವಾ ಆರ್ಥ ಶಾಖೆಯ ಯಾವುದೇ ಒಬ್ಬ ಅಧಿಕಾರಿಯನ್ನು ಅದರಲ್ಲಿ ಸೇರಿಸಿಲ್ಲ. ಆದುದರಿಂದ ಆ ಒಂದು ಕಮಿಟಿಯ ಆ ಪ್ರದೇಶದ ಅಭಿವೃದ್ಧಿಯನ್ನು ಉದ್ದೇಶವಾಗಿಟ್ಟುಕೊಂಡು ಒಂದು ರಿಪೋರ್ಟ್‌ನ್ನು ಕೊಟ್ಟಿದ್ದಾರೆ. ೩೫೦ ಕೋಟಿ ರೂಪಾಯಿಗಳ ಒಂದು ಯೋಜನೆಯನ್ನು ೧೦ ವರ್ಷದಲ್ಲಿ ಮಾಡಬೇಕು ಎನ್ನುವ ಬಗ್ಗೆ...

ಶ್ರೀ ಧರ್ಮಸಿಂಗ್.—ಆ ಕಮಿಟಿಯಲ್ಲಿ ಫಿನಾನ್ಸ್‌ನ ಬಾಲಸುಬ್ರಮಣ್ಯಂರವರು ಕಾರ್ಯದರ್ಶಿಯಾಗಿ ಕೆಲಸ ಮಾಡಿದ್ದಾರೆ..

ಶ್ರೀ ಎಂ. ವೀರಪ್ಪಮೊಯ್ಲಿ.—ಇದನ್ನು ಕ್ಲಾರಿಫೈ ಮಾಡುವ ಉದ್ದೇಶದಿಂದ ಹೇಳುತ್ತಿದ್ದೇನೆ. ಆ ಕಮಿಟಿಯಲ್ಲಿ ಯಾವ ಅಧಿಕಾರಿಯೂ ಇಲ್ಲವೆಂದು ಮುಖ್ಯಮಂತ್ರಿಗಳವರು ಹೇಳಿದರು ಆದರೆ ಆ ಕಮಿಟಿಯಲ್ಲಿ ಶ್ರೀ ಬಾಲಸುಬ್ರಮಣ್ಯಂರವರೇ ಸೆಕ್ರಟರಿಯಾಗಿದ್ದಾರೆ..

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ಹಿಂದಿನ ಹಣಕಾಸಿನ ಸಚಿವರು ಇಲ್ಲಿಯೇ ಇದ್ದಾರೆ ಅವರಿಗೊಂದು ಪ್ರಶ್ನೆ ಹಾಕಬಯಸುತ್ತೇನೆ. ನೀವು ಹೇಳಿದ್ದರಲ್ಲಿ ದೋಷ ಹುಡುಕಿ ಹೇಳುತ್ತಿಲ್ಲ. ಇದು ಸಾಧ್ಯವಾದಷ್ಟು ಬೇಗ ಮಾಡಬೇಕಾದಂಥ ಕೆಲಸ ಅದರ ಬಗ್ಗೆ ನನ್ನ ಭಿನ್ನಾಭಿಪ್ರಾಯವೇನೂ ಇಲ್ಲ. ಈಗ ಏನಾಗಿದೆಂದರೆ ೩೫೦ ಕೋಟಿ ರೂ.ಗಳ ಯೋಜನೆಯನ್ನು ೧೦ ವರ್ಷಗಳಲ್ಲಿ ಮಾಡತಕ್ಕದ್ದು ಆಗಿದೆ ಆದರೆ ಇವರು ೧೯೮೨-೮೩ರಲ್ಲಿ ಇದಕ್ಕೆ ೧೦ ಕೋಟಿ ರೂಪಾಯಿಗಳನ್ನು ಖರ್ಚು ಮಾಡಬೇಕು ಎನ್ನತಕ್ಕ ಸೂಚನೆ ಮಾಡಿದ್ದಾರೆ. ಆದರೆ ಇವರು ಬಜೆಟ್‌ನಲ್ಲಿ ಎಷ್ಟು ಕೊಟ್ಟಿದ್ದಾರೆಂದರೆ ೧೦ ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಾರೆ ಆ ಮೇಲೆ ಏನು ಮಾಡಿದ್ದಾರೆಂದರೆ ಬೇರೆ ಬೇರೆ ಡಿಪಾರ್ಟ್‌ಮೆಂಟ್‌ಗಳಲ್ಲಿ ಖರ್ಚು ಆಗತಕ್ಕಂಥದ್ದು ಏನಿದೆ ಉದಾಹರಣೆಗೆ ಪಿ.ಡಬ್ಲ್ಯು.ಡಿ. ಯಿಂದ ಇಷ್ಟು ತೆಗೆದುಕೊಳ್ಳುವುದು. ನೀರಾವರಿ ಇಲಾಖೆಯಿಂದ ಇಷ್ಟು ಹಣವನ್ನು ತೆಗೆದುಕೊಳ್ಳುವುದು ಹೀಗೆ ಒಂದೊಂದು ಇಲಾಖೆಯಿಂದಲೂ ಇಷ್ಟಿಷ್ಟು ಹಣವನ್ನು ಕೂಡಿಸಿ, ಕೂಡಿಸಿ ಒಟ್ಟು ೭ ೮,೧೦ ಕೋಟಿ ಆಗುವ ಹಾಗೆ ಮಾಡಿದ್ದಾರೆ. ಆದರೆ ಬಜೆಟ್‌ನಲ್ಲಿ ಮಾತ್ರ ಈ ಕೆಲಸಕ್ಕೆ ಇಟ್ಟಿದ್ದು ಕೇವಲ ೧೦ ಲಕ್ಷ ರೂಪಾಯಿಗಳು ಮಾತ್ರ. ಆದಕ್ಕೆ ಈ ಸಲದ ಬಜೆಟ್ ಭಾಷಣದಲಿ ನಾವು ಏನು ಹೇಳಿದ್ದೇವೆಂಬುದರ ಮಾನ್ಯ ಸದಸ್ಯರಿಗೆ ನೆನಪಿರಬಹುದು. ಈಗ ನಮ್ಮ ಕರ್ನಾಟಕ ರಾಜ್ಯದಲ್ಲಿ ರೀಜನಲ್ ಇಂಬ್ಯಾಲೆನ್ಸ್ ಏನಿದೆಯೆಂದು

ಹೇಳುತ್ತೇವೆ ಅದು ಒಂದು ಡಿವಿಜನ್‌ನಿಂದ ಮತ್ತೊಂದು ಡಿವಿಜನಲ್‌ನಲ್ಲಿ ಇಂಬ್ಯಾಲೆನ್ಸ್ ಇದೆ, ಚಳ್ಳಕೆರೆಯಲ್ಲೋ, ಮೊಳಕಾಲ್ಮೂರಿನಲ್ಲೋ ಯಾವುದೋ ಸಂದರ್ಭದಲ್ಲಿ ಹೇಳಿದ್ದೇನೆ, ಈ ಗುಲ್ಬರ್ಗಾ, ಬಿಜಾಪುರ, ರಾಯಚೂರು ಜಿಲ್ಲೆಗಳು ಏನಿದೆ ಇದು ವರ್ಸ್‌ಟ್ ಎಫೆಕ್ಟೆಡ್ ಏರಿಯಾ ಇದಕ್ಕಿಂತ ಕೆಟ್ಟ ಪರಿಸ್ಥಿತಿ ಎಲ್ಲೂ ಇಲ್ಲವೆಂದು. ಬಿಜಾಪುರದ ಕೆಲವು ಭಾಗದಲ್ಲಿ ಬಹಳ ದಾರುಣವಾದ ಪರಿಸ್ಥಿತಿ ಇದೆ. ಮಳೆ ಬಂದಿಲ್ಲ ನೀರು ಇಲ್ಲ. ಬಹಳ ಹಿಂದುಳಿದ ಜಿಲ್ಲೆಯಾಗಿದೆ. ಅದಕ್ಕಾಗಿ ಈ ಸಲ ನಮ್ಮ ಹೊಸ ಸರ್ಕಾರ ಬಂದ ಮೇಲೆ ಈ ವಿಚಾರವನ್ನು ನಾನು ಕೇಂದ್ರ ಸರ್ಕಾರದವರ ಹತ್ತಿರ ಮಾತನಾಡುವಾಗ, ಕೇಂದ್ರ ಸರ್ಕಾರದವರ ಸಹಾಯವಿಲ್ಲದೆ ಮಾಡತಕ್ಕಂಥದ್ದಕ್ಕೆ ಸಾಧ್ಯವಿಲ್ಲವೆಂದು ಹೇಳಿದ್ದೇನೆ. ೬ನೇ ಪ್ಲಾನ್‌ನಲ್ಲಿ ಅಂದರೆ ೧೯೮೨-೮೩, ೮೩-೮೪ ರಲ್ಲಿ ಒಂದು ಕಾಸನ್ನೂ ಕೂಡ ಕೊಟ್ಟಿಲ್ಲ. ಅಂದರೆ ಇದರಲ್ಲಿ ೩೫ ಕೋಟಿ ರೂ.ಗಳನ್ನು ನಾವು ಎರಡು ವರ್ಷಗಳಲ್ಲಿ ಖರ್ಚು ಮಾಡುವುದಾದರೆ ನಾನ್ ಪ್ಲಾನ್ ಎಕ್ಸ್‌ಪೆಂಡೀಚರ್ ಆಗುತ್ತದೆ. ಇದನ್ನು ತಾವು ದಯವಿಟ್ಟು ಗಮನಿಸಬೇಕು. ನಮ್ಮ ಸರ್ಕಾರದವರು ಒಂದು ತೀರ್ಮಾನ ಮಾಡಿದ್ದೆವು, ಅದು ಏನೆಂದರೆ ಪ್ರತಿಯೊಂದು ಡಿವಿಜನಲ್ಲೂ ಕೂಡ ಈಗ ಏನು ಅಭಾವ ಪೀಡಿತ ಪ್ರದೇಶಗಳು ಇದೆ ಅದರ ಸಂಪೂರ್ಣ ಅಭಿವೃದ್ಧಿಗೆ ನಾವು ಪ್ರಯತ್ನ ಮಾಡಬೇಕು ಅದಕ್ಕಾಗಿ ಪ್ರತಿಯೊಂದು ಡಿವಿಜನಲ್ಲೂ ಒಂದು ಡೆವಲಪ್‌ಮೆಂಟ್ ಬೋರ್ಡ್ ಮಾಡಬೇಕೆಂದು ಹೇಳತಕ್ಕ ತೀರ್ಮಾನ ತೆಗೆದುಕೊಂಡಿದ್ದೇವೆ. ಅದನ್ನು ಬಜೆಟ್‌ನ ಭಾಷಣದಲ್ಲೂ ಹೇಳಿದ್ದೇನೆ. ಈಗ ಅದು ಸ್ಟ್ಯಾಟ್ಯುಟರಿ ಬೋರ್ಡ್ ಆಗುತ್ತದೆಯೋ ಅಥವಾ ಎಗ್ಜಿಕ್ಯುಟಿವ್ ಆರ್ಡರ್‌ನಲ್ಲಿ ಮಾಡತಕ್ಕದ್ದೇ ಮತ್ತೆ ಅದರಲ್ಲಿ ಯಾರು ಇರಬೇಕು, ಶಾಸಕರು ಮತ್ತೆ ಬೇರೆಯವರು ಇರಬೇಕೇ ಬೇಡವೇ ಅಫಿಶಿಯಲ್ಸ್ ಎಷ್ಟು ಜನ ಇರಬೇಕು ಎನ್ನುವ ಬಗ್ಗೆ ಡಿಟೇಲ್ಸ್ ಎಲ್ಲವನ್ನೂ ನೋಡತಕ್ಕದ್ದು ಇದೆ. ಅದರ ಬಗ್ಗೆ ಮುಂದಿನ ಸಲ ಹೆಚ್ಚಿಗೆ ವಿಚಾರವನ್ನು ಹೇಳಬಹುದಾಗಿದೆ. ಆದರೆ ೧೬ ವರ್ಷಗಳ ಹಿಂದೆಯೇ ನಮ್ಮ ಕರ್ನಾಟಕ ರಾಜ್ಯದ ಬರಗಾಲ ಪೀಡಿತ ಪ್ರದೇಶದ ಅಭಿವೃದ್ಧಿಯ ಬಗ್ಗೆ ಯೋಜನಾ ಆಯೋಗದವರ ಹತ್ತಿರ ಮಾತನಾಡಿದ್ದಾಗ ಸುಮಾರು ೨೮೦ ಕೋಟಿ ರೂಪಾಯಿಗಳು ಬೇಕಾಗಿತ್ತು ಎಂದು ಕೇಳಿದ್ದೆವು ಈಗ ಬಹುಶಃ ಅದು ೨,೫೦೦ ಕೋಟಿ ರೂಪಾಯಿಗಳು ಬೇಕಾಗಬಹುದು. ಏತಕ್ಕೆಂದರೆ ಇನ್‌ಫ್ಲೇಷನ್ ಇದೆ ಇದೆಲ್ಲವನ್ನೂ ಲೆಕ್ಕ ಹಾಕಿಕೊಂಡರೆ ಜಾಸ್ತಿಯಾಗುತ್ತದೆ. ಇದನ್ನು ಮಾಡಲು ಎರಡು ಭಾಗ ವಿಂಗಡಣೆ ಮಾಡುತ್ತೇವೆ ಒಂದು ಅಭಿವೃದ್ಧಿಗೆ ಸಂಬಂಧಪಟ್ಟಿದ್ದು ಮತ್ತೊಂದು ಜನರ ವೇಲ್‌ಫೇರ್‌ಗೆ ಸಂಬಂಧಪಟ್ಟಿದ್ದು ಕುಡಿಯುವ ನೀರಿನ ವ್ಯವಸ್ಥೆಯದು. ಕೆಲವು ಕಡೆ ಭೂಗರ್ಭದಲ್ಲಿ ೨೦೦, ೩೦೦, ೫೦೦ ಅಡಿ ಕೆಳಗಡೆ ಭಾವಿ ತೆಗೆದರೂ ನೀರು ಸಿಗದೇ ಇರತಕ್ಕಂಥ ಪರಿಸ್ಥಿತಿ ಇದೆ. ಅದಕ್ಕಾಗಿ ಅವರೆಲ್ಲಾ ೪-೫ ಮೈಲಿಗಳ ದೂರದಿಂದ ನೀರನ್ನು ತರತಕ್ಕಂಥ ಪರಿಸ್ಥಿತಿ ಇದೆ. ಆದುದರಿಂದ ಇದರ ಜವಾಬ್ದಾರಿ ಹೆಚ್ಚು ಇದೆ ಇದಕ್ಕೆ ಹೆಚ್ಚಿಗೆ ವಿಚಾರಗಾತ್ತದೆಂದು ಹೇಳಿಬಿಡುವುದಕ್ಕೂ ಆಗುವುದಿಲ್ಲ. ಆದುದರಿಂದ ನಮ್ಮ ಸಾರ್ವಲ್ ರಿಸೋರ್ಸ್‌ಸ್ ಏನಿದೆ, ಆದರಿಂದ ಈ ಕೆಲಸಗಳನ್ನು ತೆಗೆದುಕೊಳ್ಳುವುದಕ್ಕೆ ಕಷ್ಟವಾಗುತ್ತದೆ. ಎಲ್ಲಿಯವರೆಗೆ ಈ ಯೋಜನೆಗೆ ಸಂಬಂಧಪಟ್ಟ ಹಾಗೆ ಕೆಲಸವಾಗುವುದಿಲ್ಲವೋ, ಅಲ್ಲಿಯವರೆಗೂ ಅದಕ್ಕೆ ಹಣವನ್ನ ಒದಗಿಸಬೇಕಾಗುತ್ತದೆ. ಅದಕ್ಕಾಗಿ ನನಗೊಂದು ವಿಶ್ವಾಸವಿದೆ ೮ನೇ ವಿತ್ತ ಆಯೋಗದ ಮುಂದೆ ನಾವು ಹೋಗಿ ಹಣವನ್ನು ಕೇಳುವುದಕ್ಕಿಂತ ಮುಂಚಿತವಾಗಿ ಬೋರ್ಡ್‌ಗಳು ರಚನೆಮಾಡಬೇಕೆಂದು ತೀರ್ಮಾನ ಮಾಡಿದ್ದೇವೆ. ವಿತ್ತ ಆಯೋಗದ ಮುಂದೆ ನಮ್ಮ ಕಷ್ಟವನ್ನು ಇಟ್ಟು ಹೇಳಬೇಕಾದರೆ ಇಲ್ಲಿಯ ಪರಿಸ್ಥಿತಿಯು ಹೇಗಿದೆ ಎಂಬುದನ್ನು ನೋಡಬೇಕಾಗಿರುತ್ತದೆ. ಈ ಪರಿಸ್ಥಿತಿ ಮುಂದುವರಿದರೆ ನಮ್ಮ ರಾಜ್ಯದ ಬೆಳವಣಿಗೆಗೆ ಆಗಲೀ ಅಥವಾ ಸಮಾಜದ ನ್ಯಾಯದೃಷ್ಟಿಯಿಂದಾಗಲೀ ಯೋಗ್ಯವಲ್ಲ ಎಂದು ಹೇಳತಕ್ಕಂಥಾ ವಾದವನ್ನು ಅವರ ಮುಂದಿಡುವುದಕ್ಕೆ ಬಯಸುತ್ತೇನೆ. ಗುಲ್ಬರ್ಗಾ ಡಿವಿಜನ್ ಆಗಲೀ, ಬೆಳಗಾಂ ಡಿವಿಜನ್ ಆಗಲೀ, ಬೆಂಗಳೂರು ಡಿವಿಜನ್ ಆಗಲೀ ಇಲ್ಲವೇ ಮೈಸೂರು ಡಿವಿಜನ್ ಆಗಲೀ ಎಲ್ಲೆಲ್ಲಿ ಅಭಾವ ಪೀಡಿತ ಪ್ರದೇಶ ವಿದೆಯೆಂದು ನಮಗೆ ಗೊತ್ತಿದೆ ಅಲ್ಲಿಗೆಲ್ಲಾ ಇದರ ಪ್ರಕಾರವಾಗಿ ನಾವು ಅವಾಪ್ತಿ ಮಾಡುತ್ತೇವೆ. ಎಲ್ಲೆಲ್ಲಿ ಹೆಚ್ಚು ನೀರಾವರಿ ಪ್ರದೇಶಗಳು ಇದೆ, ಆರ್ಥಿಕವಾಗಿ ಮುಂದುವರಿದ ಪ್ರದೇಶವಿದೆ ಅಲ್ಲಿಗೆ ನಾವು ಹೆಚ್ಚು ಖರ್ಚು ಮಾಡತಕ್ಕದ್ದು ಯೋಗ್ಯವಾಗುವುದಿಲ್ಲ. ಇದನ್ನು ಈ ಪ್ರಕಾರವಾಗಿ ಮಾಡುತ್ತೇವೆ. ಈ ಅಭಾವ ಪೀಡಿತ ಪ್ರದೇ ಶಕ್ಕೆ ಸಮಗ್ರವಾದ ಅಭಿವೃದ್ಧಿಯ ಯೋಜನೆಯ ಕಾರ್ಯಗಳನ್ನು ನಾವು ಮಾಡುತ್ತಿದ್ದೇವೆಂದು ಮಾನ್ಯ ಸದಸ್ಯರುಗಳಿಗೆ ಹೇಳುವುದಕ್ಕೆ ಬಯಸುತ್ತೇನೆ. ಇದರ ಬಗ್ಗೆ ಇನ್ನೂ ಹೆಚ್ಚು ಚರ್ಚೆ ಆಗಬೇಕಾವಂಥ ಆಗತ್ಯವಿಲ್ಲವೆಂದು ಕಾಣುತ್ತದೆ.

ಶ್ರೀ ಎಂ. ವೀರಪ್ಪ ಮೊಯ್ಲಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಮುಖ್ಯಮಂತ್ರಿಗಳವರು ಕೆಲವು ವಿಚಾರಗಳನ್ನು ಹೇಳಿದ್ದಾರೆ. ಈ ಹೈದರಾಬಾದ್ ಏರಿಯಾ ಪ್ರದೇಶವೇನಿದೆ ಇದು ಕೆಲವು ವಿಶಿಷ್ಟವಾದ ಕೆಲವು ಸಮಸ್ಯೆಗಳನ್ನು ಹೊಂದಿದೆ, ಹಿಂದೆ ನಿಜಾಮರ ಆಡಳಿತ ಇರುವಾಗ ಮೂಲಭೂತವಾಗಿ ಹುಟ್ಟಿ ದಂಥ ಪ್ರಶ್ನೆಗಳನ್ನು ವಿಶ್ಲೇಷಣೆ ಮಾಡಿ, ವಿಮರ್ಶೆ ಮಾಡಿ ಸಮಿತಿಯವರು ವರದಿಯನ್ನು ಕೊಟ್ಟಿದ್ದಾರೆ. ಈ ಸಮಿತಿಯು ಸಬ್ ಕಮಿಟಿಯಲ್ಲ ಕಮಿಟಿ ಎಂದು ಮುಖ್ಯಮಂತ್ರಿಗಳವರು ಹೇಳುತ್ತಿದ್ದಾರೆ. ಇದರಲ್ಲಿ ಮಂತ್ರಿಗಳು ಇದ್ದಾರೆ, ಕೆಲವು ಶಾಸಕರೂ ಇದ್ದಾರೆ ಮತ್ತು ಎಂ. ಪಿ. ಯವರೂ ಇದ್ದಾರೆ ಆದರೆ ಆರ್ಥ ಶಾಖೆಯ ಮತ್ತು ಬೇರೆ ಶಾಖೆಯ ಅಧಿಕಾರಿಗಳು ಇಲ್ಲವೆನ್ನುವ ಭಾವನೆಯಿಂದ ಹೇಳಿದ್ದಾರೆ. ಆದರೆ ಇದರಲ್ಲಿ ಬಾಲಸುಬ್ರಮಣ್ಯಂರವರೇ ಕಾರ್ಯದರ್ಶಿಗಳಾಗಿದ್ದಾರೆ. ಆದುದರಿಂದ ಇದನ್ನು ಸ್ಪಷ್ಟೀಕರಣಗೊಳಿಸಬೇಕಾಗಿದೆ.

ಎರಡನೆಯದಾಗಿ, ಇದು ಒಂದು ಹಿಂದುಳಿದ ಪ್ರದೇಶವೆಂದು ಹೇಳಿದ ಕೂಡಲೇ ರಾಜ್ಯದ ಎಲ್ಲ ಅನೇಕ ಪ್ರದೇಶಗಳು ಹಿಂದುಳಿದಿವೆ ಎಂಬುದಲ್ಲ. ಇದು ಒಂದು ವಿಶಿಷ್ಟವಾದ ಪ್ರದೇಶ. ಅಲ್ಲಿರತಕ್ಕ ವಿಶಿಷ್ಟ ಸಮಸ್ಯೆಗಳನ್ನು ಪರಿಹಾರ ಮಾಡಲಿಕ್ಕೆ ಒಂದು ಸಮಿತಿ ರಚನೆಯಾಗಿದೆ. ಅದರ ಮೇಲೆ ಒಂದು ಬೋರ್ಡನ್ನು ಮಾಡಬೇಕೆಂದು ಇದ್ದದನ್ನು ತಾವು ಸಂಪೂರ್ಣವಾಗಿ ಕೈಬಿಡುವ ಆಲೋಚನೆ ಮಾಡಿದ್ದೀರಿ. ಏಕೆಂದರೆ ಇಡೀ ರಾಜ್ಯಕ್ಕೆ ಸಂಬಂಧಪಟ್ಟ ಸಮಸ್ಯೆಗಳನ್ನು ಪರಿಹರಿಸುವಾಗ ಅದರಲ್ಲಿ ಇದನ್ನೂ ಸೇರಿಸಿಕೊಳ್ಳದೆ ಸಮಸ್ಯೆಯನ್ನು ಪರಿಹಾರ ಮಾಡುತ್ತೇವೆಂದು ಹೇಳಿದರೆ ಬಹುಶಃ ಯಾರಿಗೂ ಸಮಾಧಾನ ಬರುವುದಿಲ್ಲ. ಹೈದರಾದಾದ್ ಕರ್ನಾಟಕ ಪ್ರದೇಶದವರಿಗಂತೂ ಸಮಾಧಾನವಾಗುವುದಿಲ್ಲ. ಅಲ್ಲಿ ವ್ಯಾಪಕವಾಗಿ ಇಡೀ ರಾಜ್ಯದ ಸಮಸ್ಯೆಗಳನ್ನು ಪರಿಹಾರ ಮಾಡಲಿಕ್ಕೆ ಹೋದರೆ ೩೫೦ ಕೋಟಿ ರೂಪಾಯಿಗಳ ಕಾರ್ಯಕ್ರಮವನ್ನು ಕೈಬಿಡುತ್ತೀರೆಂಬ ಪ್ರಶ್ನೆ ಇದೆ. ಇದನ್ನು ಸ್ಪಷ್ಟೀಕರಿಸಬೇಕು. ೨೪–೨೨ರಲ್ಲಿ ಗುಲ್ಬರ್ಗದಲ್ಲಿ ನಡೆದ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ಈ ಸಮಿತಿಯ ವರದಿಯನ್ನು ಸ್ವೀಕಾರ ಮಾಡಲಾಗಿತ್ತು. ೧೯೮೨–೮೩ನೇ ಸಾಲಿನ ಬಡ್ಜೆಟ್ಟಿನಲ್ಲಿ ಇದಕ್ಕೆ ಅವಕಾಶ ಇರಲಿಲ್ಲ. ಇದನ್ನು ಭಾಗಶಃ ಚರ್ಚೆ ಮಾಡಿ ಒಪ್ಪಿ ೭ ಕೋಟಿ ರೂಪಾಯಿಗಳವರೆಗೆ ಖರ್ಚು ಮಾಡಿ ಈಗ ಬಡ್ಜೆಟ್ಟಿನಲ್ಲಿ ಸೇರಿಸಲಿಕ್ಕೆ ಅವಕಾಶ ಇದ್ದರೂ ಕೂಡ ತಾವು ಸೇರಿಸದೆ ಇದ್ದುದರಿಂದ ಈ ಅನುಮಾನಕ್ಕೆ ಕಾರಣವಾಗಿದೆ. ಇದು ಮುಖ್ಯ ಮಂತ್ರಿಗಳು ನಗುವ ಪ್ರಶ್ನೆಯಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ನಾನೇನಾದರೂ ಹೇಳಿದರೆ ತಪ್ಪು ತಿಳಿಯಬಾರದು. ಡೆವಲಪ್‌ಮೆಂಟ್ ಕಮೀಷನರ್ ಮತ್ತು ಸೆಕ್ರೆಟರಿ ಇದ್ದಾಗ್ಗೆ ಹಣಕಾಸಿನ ಮತ್ತು ಯೋಜನಾ ಇಲಾಖೆಯ ಅಪ್ರೂವ್ ಆದ ಹಾಗೆ ಆಯಿತು.

ಶ್ರೀ ಎಂ. ವೀರಪ್ಪ ಮೊಯಿಲಿ.—ಯಾರು ಹೇಳಿದ್ದು ?

ಶ್ರೀ ರಾಮಕೃಷ್ಣ ಹೆಗಡೆ.—ನೀವು ಹೇಳುವುದು ಹಾಗೆ. ಕ್ಯಾಬಿನೆಟ್‌ನಲ್ಲಿ ಯಾವಾಗ ನಿರ್ಣಯವಾಯಿತು ಎಂಬುದನ್ನು ಮಾನ್ಯ ಸದಸ್ಯರು ಹೇಳಬೇಕು. ಅದು ಫಾರ್ಮಲ್ ಡಿಸಿಷನ್ ಅಲ್ಲ, ಇನ್‌ಫಾರ್ಮಲ್ ಆಗಿ ಕ್ಯಾಬಿನೆಟ್‌ನಲ್ಲಿ ಆದದ್ದು. ಯೋಜನಾ ಇಲಾಖೆಗಾಗಲೀ ಅಥವಾ ಹಣಕಾಸಿನ ಇಲಾಖೆಗಾಗಲೀ ಫೈಲು ಹೋಗಿಲ್ಲ. ಅದನ್ನು ಬೇಕಾದರೆ ತೋರಿಸುತ್ತೇನೆ. ಕ್ಯಾಬಿನೆಟ್ ಡಿಸಿಷನ್ ಆಗಿದೆ ಎಂಬುದನ್ನು ಕೇಳಬೇಕು. ಇದರಲ್ಲಿ ೩೦೦ ಕೋಟಿ ರೂಪಾಯಿಗಳನ್ನು ಕೊಡಬೇಕೆಂದೂ ಹೇಳಿಲ್ಲ, ೧೦ ಕೋಟಿ ರೂಪಾಯಿಗಳನ್ನು ಕೊಡಬೇಕೆಂದೂ ಹೇಳಿಲ್ಲ. ಈಗ ಅದನ್ನು ಓದುತ್ತೇನೆ, ಸ್ವಲ್ಪ ಕೇಳಿ.

> "The Cabinet having considered the Report of the Hyderabad-Karnataka Development Committee on plan for Backward area Development, Gulbarga Division has decided to form a board for the co-ordination of the developmental acitivities of Gulbarga Division. The Board Will be called Gulbarga Area Development Board. The Board Will be an effective agency to formulate Schemes, to

monitor the planned schemes and generally be a watch dog for safeguarding the interests of the Division and to ensure that lapsing of funds by various Goverment departments is avoided.''

ಶ್ರೀ ಧರ್ಮಸಿಂಗ್.—೨೮–೪–೮೨ರಲ್ಲಿ ತೆಗೆದುಕೊಂಡಿರತಕ್ಕ ಕ್ಯಾಬಿನೆಟ್ ಡಿಸಿಷನ್ ಕೂಡ ಇದೆ. ಆವತ್ತಿನ ದಿವಸ ಎಷ್ಟು ಹಣ ಖರ್ಚು ಮಾಡಬೇಕೆಂಬ ಬಗ್ಗೆ ನಿರ್ಣಯ ತೆಗೆದುಕೊಳ್ಳಲಾಗಿದೆ. ಅದನ್ನು ತಾವು ಕೂಡ ನೋಡಬಹುದು.

ಶ್ರೀ ರಾಮಕೃಷ್ಣ ಹೆಗಡೆ.—ಒಂದು ವೇಳೆ ಡಿಸಿಷನ್ ಆಯಿತು ಎಂದು ಇಟ್ಟುಕೊಳ್ಳೋಣ. ಆದರೆ ಯೋಜನಾ ಮತ್ತು ಹಣಕಾಸಿನ ಇಲಾಖೆಗಳ ಒಪ್ಪಿಗೆ ಇಲ್ಲದೆ ಆಗುವುದಿಲ್ಲವೆಂಬುದು ಸರಿಯೆ ? ಹೋದ ವರ್ಷದ ಆಯವ್ಯಯವನ್ನು ಮಂಡಿಸಿದವರು ತಾವೇ ಅಥವಾ ಬೇರೆಯವರೋ ? ಹಾಗಿದ್ದರೆ ಯಾವ ಕಾರಣದಿಂದ ೧೦ ಕೋಟಿ ರೂಪಾಯಿ ವೆಚ್ಚವಾಗುತ್ತದೆಂದು ಅಂದಾಜು ಮಾಡಿ ೧೦ ಲಕ್ಷ ರೂಪಾಯಿಗಳನ್ನು ಇಟ್ಟಿರಿ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಈ ವರದಿಯನ್ನು ಸ್ವೀಕಾರ ಮಾಡಿದ್ದು ಏಪ್ರಿಲ್ ೧೯೮೨ರಲ್ಲಿ.

ಶ್ರೀ ರಾಮಕೃಷ್ಣ ಹೆಗಡೆ.—೧೯೮೧ನೇ ಅಕ್ಟೋಬರ್‌ನಲ್ಲಿ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇಲ್ಲ, ಇಲ್ಲ. ೨೮–೪–೮೨ರಲ್ಲಿ. ಅದಕ್ಕೆ ನನ್ನ ಹತ್ತಿರ ಆಧಾರ ಇದೆ.

ಶ್ರೀ ಧರ್ಮಸಿಂಗ್.—ಪ್ರತಿಯೊಂದು ಮೀಟಿಂಗ್‌ನಲ್ಲೂ ಯೋಜನಾ ಇಲಾಖೆಯ ಉಪ ಕಾರ್ಯದರ್ಶಿಗಳು, ಅಪರ ಮುಖ್ಯ ಕಾರ್ಯದರ್ಶಿಗಳು ಹಾಜರಿರುತ್ತಿದ್ದರು. ಬೇರೆ ರಾಜ್ಯಗಳಿಗೆ ಹೋದರೂ ಯೋಜನಾ ಇಲಾಖೆಯವರು ನಮ್ಮ ಜೊತೆಯಲ್ಲಿ ಬಂದಿದ್ದಾರೆ. ಆ ಎಲ್ಲ ವಿವರಗಳು ಇವೆ.

ಶ್ರೀ ರಾಮಕೃಷ್ಣ ಹೆಗಡೆ.—ಇಲ್ಲಿ ೨೨–೧೦–೮೧ ಎಂದು ಇದೆ. ಅಂದು ಕ್ಯಾಬಿನೆಟ್ ನಲ್ಲಿ ಇನ್‌ಫಾರ್ಮಲ್ ಡಿಸಿಷನ್ ತೆಗೆದುಕೊಳ್ಳಲಾಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಎಲ್ಲಿ ತೆಗೆದುಕೊಂಡದ್ದು ? ಬೆಂಗಳೂರಿನಲ್ಲೋ ಅಥವಾ ಬೇರೆ ಕಡೆಯೋ ? ನಮಗೆ ನಿಮ್ಮನ್ನು ಮಿಸ್‌ಲೀಡ್ ಮಾಡಬೇಕೆಂಬ ಉದ್ದೇಶ ಇಲ್ಲ. ಪೂರಾ ವರದಿಯನ್ನು ಸ್ವೀಕಾರ ಮಾಡಿದ್ದು ೨೮–೪–೮೨ ರಂದು ಗುಲ್ಬರ್ಗದಲ್ಲಿ ನಡೆದ ಕ್ಯಾಬಿನೆಟ್ ಮೀಟಿಂಗ್ ನಲ್ಲಿ. ಹಾಗಿದ್ದಮೇಲೆ ೧೯೮೨–೮೩ರ ಬಜೆಟ್ ಪುಂಡನೆ ಮಾಡಿದ ಮೇಲೆ ಸೇರಿಸುವುದು ಹೇಗೆ ?

ಶ್ರೀ ರಾಮಕೃಷ್ಣ ಹೆಗಡೆ.—೧೦ ಲಕ್ಷ ರೂಪಾಯಿಗಳನ್ನು ಏತಕ್ಕೆ ಹಾಕಿದಿರಿ

ಶ್ರೀ ಎಂ. ವೀರಪ್ಪ ಮೊಯಿಲಿ.—ಆಗ ಕಮಿಟಿಯನ್ನು ಅಪಾಯಿಂಟ್ ಮಾಡಿದೆವು. It is a symbolic acceptance as far as the programmes which will be recommended by the Committee. ರಿಪೋರ್ಟನ್ನು ಆಡ್ಮಿಟ್ ಮಾಡಬೇಕಾದರೆ ಯಾವ ಸ್ವರೂಪದಲ್ಲಿ ರಿಪೋರ್ಟ್ ಬರುತ್ತದೆಂಬುದನ್ನು ನೋಡಬೇಕಾಗುತ್ತದೆ. ಯಾವ ಬಾಬಿಗೆ ಎಷ್ಟು ಹಣ ಕೊಡಬೇಕೆಂಬುದನ್ನು ನೋಡ ಬೇಕಾಗುತ್ತದೆ. ಆ ವರದಿ ಬಂದದ್ದು ಬಜೆಟ್ ಪ್ರೆಸೆಂಟೇಷನ್ ಮಾಡಿದ ಮೇಲೆ.

ಶ್ರೀ ರಾಮಕೃಷ್ಣ ಹೆಗಡೆ.—ಗುಲ್ಬರ್ಗದಲ್ಲಿ ಕ್ಯಾಬಿನೆಟ್ ಮೀಟಿಂಗ್ ಆದದ್ದು ಯಾವಾಗ ?

ಶ್ರೀ ಎಂ. ವೀರಪ್ಪ, ಮೊಯಿಲಿ.—೨೮–೪–೮೨ರಲ್ಲಿ.

ಶ್ರೀ ರಾಮಕೃಷ್ಣ ಹೆಗಡೆ.—ಅಸತ್ಯ ಮಾತನಾಡುತ್ತೇನೆಂದರೆ ಏನು ಹೇಳಲಿ ? ನನ್ನ ಹತ್ತಿರ ಕ್ಯಾಬಿನೆಟ್ ಪೇಪರ್ಸ್ ಇವೆ. ಕ್ಯಾಬಿನೆಟ್ ಮೀಟಿಂಗ್ ೨೨–೧೦–೮೧ರಲ್ಲಿ ನಡೆದಿರುವ ದಾಖಲೆಯನ್ನು ಬೇಕಾದರೆ ನಾನು ನಿಮಗೆ ತೋರಿಸುತ್ತೇನೆ. There must be a limit for misleading the House.

SRI M. VEERAPPA MOILY :—You can check up the records.

ಶ್ರೀ ರಾಮಕೃಷ್ಣ ಹೆಗಡೆ.—೨೨–೧೦–೮೧ರಂದು ಗುಲ್ಬರ್ಗದಲ್ಲಿ ನಡೆದ ಮೀಟಿಂಗ್ ವಿಚಾರ ಹೇಳುತ್ತಿದ್ದೇನೆ. ಸ್ಮೃತಿಯಲ್ಲಿ ವ್ಯತ್ಯಾಸ ಇದ್ದರೆ ವೈದ್ಯರನ್ನು ಕೇಳಬೇಕಂ.

ಶ್ರೀ ಧರ್ಮಸಿಂಗ್.—ಈ ರೀತಿಯಾಗಿ ಉತ್ತರ ಕೊಡುವುದು ಸರಿಯಲ್ಲ.

SRI M. VEERAPPA MOILY.—Please enlighten the House ? Please give us the correct information. Which Cabinet meeting ? Is it the Cabinet meeting held on 22-10-1981 ? There was also a Cabinet meeting held on 28-4-82 at Gulbarga for accepting the Hyderabad-Karnataka Area Development Board.

ಶ್ರೀ ರಾಮಕೃಷ್ಣ ಹೆಗಡೆ.—ರಿಪೋರ್ಟ್ ಕೊಟ್ಟಿದ್ದು ೧೫–೧೦–೧೯೮೧ ರಲ್ಲಿ.

ಶ್ರೀ ಎಂ. ವೀರಪ್ಪ ಮೊಯಿಲಿ.—೨೮–೪–೧೯೮೨ರಂದು ಗುಲಬರ್ಗದಲ್ಲಿ ನಡೆದ ಕ್ಯಾಬಿನೆಟ್ ಮೀಟಿಂಗ್‌ನಲ್ಲಿ ವರದಿಯನ್ನು ಸ್ವೀಕಾರ ಮಾಡಲಾಯಿತು. ಅಂದು ವರದಿಯನ್ನು ಸ್ವೀಕಾರ ಮಾಡಿದ್ದರಿಂದ ಬಜೆಟ್ಟಿನಲ್ಲಿ ಸೇರಿಸುವುದಕ್ಕೆ ಅವಕಾಶವಾಗಿಲ್ಲ. But, symbolically we have accepted the commitment in the Budget.

ಶ್ರೀ ಕೆ. ಎಚ್. ರಂಗನಾಥ್.—ಅಧಿಕಾರಿಗಳು ನಾಳೆ ದಿವಸ ನಿಮಗೂ ತೊಂದರೆ ಮಾಡಿಯಾರು. ಇದನ್ನೆಲ್ಲ ನೋಡಿದರೆ ಹೆದರಿಕೆ ಆಗುತ್ತದೆ. ತಮಗೆ ಮಿಸ್‌ಲೀಡ್ ಆದರೆ ಕಷ್ಟವಾಗಬಹುದು.

ಶ್ರೀ ಎಂ. ವೀರಪ್ಪ ಮೊಯಿಲಿ.—ನಾವು ವರದಿಯನ್ನು ಸ್ವೀಕಾರ ಮಾಡಿದ್ದು ೨೮–೪–೧೯೮೨ ರಂದು ಎಂದು ಇದೆ. But, I remember very well that it was processed. ನಾವು ಯಾವುದಾದರೂ ವರದಿಯನ್ನು ಆನುಷ್ಠಾನ ಮಾಡಬೇಕಾದರೆ ಬೇರೆ ಬೇರೆ ಇಲಾಖೆಗಳಲ್ಲಿ ಪ್ರೊಸೆಸ್ ಮಾಡಬೇಕಾಗುತ್ತದೆ. ಯಾವ ಬಾಬಿನಲ್ಲಿ ಹಣ ಕೊಡಬೇಕು ಎಂಬುದನ್ನು ಸೂಚನೆ ಮಾಡಬೇಕಾಗುತ್ತದೆ. ಆದ್ದರಿಂದಲೇ ನಾವು symbolically we have accepted the commitment in the budget. ನಂತರ ಯಾವರೀತಿಯಲ್ಲಿ ಹಣ ಒದಗಿಸುವುದಕ್ಕೆ ಸಾಧ್ಯವಾಗುತ್ತದೆ ಎಂಬ ಬಗ್ಗೆ ೨–೯–೧೯೮೨ರಲ್ಲಿ ಡೆವಲಪ್‌ಮೆಂಟ್ ಕಮಿಷನರ್‌ರವರ ಚೇಂಬರ್‌ನಲ್ಲಿ ಮೀಟಿಂಗ್ ಆಯಿತು. ಅದರಲ್ಲಿ ಬೇರೆ ಬೇರೆ ಇಲಾಖೆಯ ಮುಖ್ಯಸ್ಥರುಗಳು ಭಾಗವಹಿಸಿದ್ದರು. ಆದರಲ್ಲಿ ೬೭೫ ಲಕ್ಷ ರೂಪಾಯಿಗಳನ್ನು ಬೇರೆ ಬೇರೆ ಬಾಬಿನಲ್ಲಿ ಸೇವ್ ಮಾಡಿ ೧೯೮೨–೮೩ರಲ್ಲಿ ಖರ್ಚು ಮಾಡಬೇಕೆಂದು ನಿರ್ಣಯ ತೆಗೆದುಕೊಂಡಿದ್ದಾರೆ. ಅದಾದನಂತರ ಆ ಹಣ ಖರ್ಚಾಯಿತು. ಹೈದರಾಬಾದ್ ಕರ್ನಾಟಕದ ಬಗ್ಗೆ ವರದಿ ಇದ್ದು ಅದನ್ನು ಪ್ಲಾನಿಂಗ್ ಇಲಾಖೆಯವರು ಹಣಕಾಸಿನ ಇಲಾಖೆಯವರು ಪ್ರೊಸೆಸ್ ಮಾಡಿದ್ದಾರೆ. ಹಿಂದಿನ ಸರ್ಕಾರ ಅದನ್ನು ಸ್ವೀಕಾರ ಮಾಡಿದೆ. ಸ್ವೀಕಾರ ಮಾಡಿ ಕೆಲವು ವಿಷಯಗಳನ್ನು ಆನುಷ್ಠಾನ ಕೂಡ ಮಾಡಿ ಎರಡನೇ ವರ್ಷ ಕಾಲಿಡುವಾಗ ಅದಕ್ಕೆ ಒಂದು ನಯಾಪೈಸೆ ಕೊಡ ಬಜೆಟ್ಟಿನಲ್ಲಿ ಇಡದಿದ್ದರೆ ಹೇಗೆ ? ನಾವು ೧೦ ಲಕ್ಷ ರೂಪಾಯಿಗಳನ್ನು ಪ್ರೊವೈಡ್ ಮಾಡಿದ್ದೆವು. It is a symbolic commitment to inspire the aspirations of the people. ತಾವು ೧೦ ಲಕ್ಷ ರೂಪಾಯಿಗಳನ್ನೂ ಪ್ರೊವೈಡ್ ಮಾಡಿಲ್ಲ.

ಶ್ರೀ ರಾಮಕೃಷ್ಣ ಹೆಗಡೆ.—ನಾವು ೧೫ ಲಕ್ಷ ರೂಪಾಯಿ ಪ್ರೊವೈಡ್ ಮಾಡಿದ್ದೇವೆ. ನೀವು ಮಾಡಿದ್ದಕ್ಕಿಂತ ಒಂದೂವರೆ ಪಟ್ಟು ಜಾಸ್ತಿ ಮಾಡಿದ್ದೇವೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಸಂತೋಷ. ಯಾವ ಯಾವ ಕಾರ್ಯ ಕ್ರಮಗಳು ಹಿಂದುಳಿದ ಪ್ರದೇಶದ ಅಭಿವೃದ್ಧಿಗೆ ಆಗಬೇಕು ಎಂಬ ಸಂಪೂರ್ಣವಾದ ರೂಪರೇಷೆಗಳು ತಮ್ಮ ಮುಂದೆ ಇರುವಾಗ ಕೇವಲ ೧೫ ಲಕ್ಷ ಕೊಟ್ಟ ಕೂಡಲೇ ಜವಾಬ್ದಾರಿಯನ್ನು ನಿರ್ವಹಿಸಿದಂತಾಗುವುದಿಲ್ಲ. ಆದ್ದರಿಂದ ದಯವಿಟ್ಟು ಹಿಂದಿನ ಪರಂಪರೆ ಏನಿದೆ ಆ ರೀತಿ ಮಾಡದೆ ಅಭಿವೃದ್ಧಿಯ ಕಡೆ ಗಮನ ಕೊಡಿ. ಇಂಥ ಹಿಂದುಳಿದ ಪ್ರದೇಶಗಳನ್ನು ನಿರ್ಲಕ್ಷಿಸಿದಂಥ ಪರಂಪರೆಯನ್ನು ಮುಂದುವರೆಸುವುದು ಬೇಡ. ಇದಕ್ಕೆ ನಾವು ಪಾರ್ಟಿಯಿರಬಹುದು, ಬೇರೆಯವರಂ ಪಾರ್ಟಿಯಿರಬಹುದು, ಅದು ಬೇರೆ ವಿಚಾರ. ವರದಿ

ಯಂಲ್ಲಿ ತಪ್ಪಿದ್ದರೆ ಅದನ್ನು ಹೇಳಿ. ಚರ್ಚೆ ಮಾಡೋಣ. ಈ ವರದಿ ಪರಿಷ್ಕರಣ ಆಗಬೇಕು, ಇದಕ್ಕೆ ತಜ್ಞರ ಸಮಿತಿ ನೇಮಕ ಆಗಬೇಕು ಎಂದು ಹೇಳಿದರು. ಅದು ಸರಿ ; ಆ ರೀತಿ ಹೇಳಿ. ಆದರೆ ಇದನ್ನು ಸಂಪೂರ್ಣವಾಗಿ ಕೈಬಿಡತಕ್ಕದ್ದು ಸರಿಯಲ್ಲ. ಇಡೀ ಕರ್ನಾಟಕ ರಾಜ್ಯದ ಹಿಂದುಳಿದ ಪ್ರದೇಶಗಳ ಸಮಗ್ರ ಆಲೋಚನೆ ಮಾಡುತ್ತೇವೆ ಎಂದು ಹೇಳಿ ಹೈದರಾಬಾದ್ ಕರ್ನಾಟಕ ಪ್ರದೇಶದ ವಿಶಿಷ್ಟ ಪರಿಸ್ಥಿತಿಯನ್ನು. ಕ್ಲಿಷ್ಟ ಸಮಸ್ಯೆಯನ್ನು ಪರಿಹಾರ ಮಾಡದೇ ತಿರಸ್ಕಾರ ಮಾಡುವಂಥ ಕೆಲಸವನ್ನು ದಯಮಾಡಿ ಮಾಡಬಾರದೆಂ ಎಂದು ಆ ಪ್ರದೇಶದ ಜನರ ಪರವಾಗಿ ತಮ್ಮನ್ನು ಕಳಕಳಿಯಿಂದ ಪ್ರಾರ್ಥನೆ ಮಾಡಿಕೊಳ್ಳುತ್ತೇನೆ.

ಶ್ರೀ ರಾಮಕೃಷ್ಣ ಹೆಗಡೆ.—ಮಾನ್ಯ ವಿರೋಧಪಕ್ಷದ ನಾಯಕರಿಗೆ ನನ್ನ ವಂದನೆಗಳು. ಕರ್ನಾಟಕದ ಅಭಿವೃದ್ಧಿಗೆ ೧೦ ಕೋಟಿ ರೂಪಾಯಿ ತೆಗೆದಿಟ್ಟಿದ್ದೇವೆಂದು ಅವರು ಯಾವರೀತಿ ಮಾಡಿದರೋ ಅದೇ ರೀತಿ ನಾವೂ ಮಾಡುವುದಾದರೆ ೧೫ ಕೋಟಿ ಅಲ್ಲ ೨೦ ಕೋಟಿ ರೂಪಾಯಿಗಳನ್ನು ಬೇಕಾದರೂ ನಾವೂ ತೆಗೆದಿಡಬಹುದು. ಆ ಭಾಗದಿಂದ ಒಂದಿಷ್ಟು ಈ ಭಾಗದಿಂದ ಒಂದಿಷ್ಟು ತೆಗೆದು ಡೈವರ್ಟ್ ಮಾಡುವುದರಿಂದ ಆ ಭಾಗಕ್ಕೆ ಯಾವುದೇ ಪ್ರಯೋಜನ ಸಿಗುವುದಿಲ್ಲ. ಆ ರೀತಿ ಮಾಡುವುದರಿಂದ ಒಂಚೂ ಎಳ್ಳುಕಾಳಿನಷ್ಟು ಪ್ರಯೋಜನವೂ ಆಗುವುದಿಲ್ಲ. ಆದಕ್ಕಾಗಿ ಪ್ರತ್ಯೇಕವಾದ ಪ್ಲಾನ್ ಮಾಡಬೇಕಾಗುತ್ತದೆ. ಅದನ್ನು ಮಾಡೇ ಮಾಡುತ್ತೇವೆ. ಹೈದರಾಬಾದ್ ಕರ್ನಾಟಕದ ಪ್ರದೇಶಕ್ಕೆ ಯಾವುದೇ ರೀತಿಯ ಅನ್ಯಾಯವೂ ಆಗದಂತೆ ನೋಡಿಕೊಳ್ಳಬೇಕಾದ ಜವಾಬ್ದಾರಿ ನಮಗಿದೆ.

ಶ್ರೀ ಎಂ. ವೀರಪ್ಪ ಮೊಯಿಲಿ.—ಇಡೀ ರಾಜ್ಯಕ್ಕೆ ಪ್ಲಾನ್ ಮಾಡುತ್ತೀರಿ. ಆದರೆ ಹೈದರಾಬಾದ್ ಕರ್ನಾಟಕ ಪ್ರದೇಶಕ್ಕೆ ಸೀಮಿತವಾಗಿ ಏನಂ ಸ್ಪೆಷಲ್ ಪ್ಲಾನ್ ಮಾಡಿದ್ದೀರಿ ?

ಶ್ರೀ ಧರ್ಮಸಿಂಗ್.—ರಾಜಕೀಯವಾಗಿ ಉತ್ತರ ಕೊಡದೇ ನೇರವಾಗಿ ಉತ್ತರ ಕೊಡಿ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಉಪಾಧ್ಯಕ್ಷರೆ, ಕ್ಯಾಬಿನೆಟ್ ಮೀಟಿಂಗ್, ಇನ್‌ಫಾರ್ಮಲ್ ಫಾರ್ಮಲ್, ಈ ವಿವರಕ್ಕೆ ನಾನು ಹೋಗುವುದಿಲ್ಲ. ಏಕೆಂದರೆ ಆ ವಿವರ ನಮ್ಮ ಬಳಿ ಇಲ್ಲ. ಲೆನೇ ವಿತ್ತೀಯ ಆಯೋಗದ ಮುಂದೆ ಈ ಪ್ರಶ್ನೆ ಬರುತ್ತದೆ. ಆದ್ದರಿಂದ ೪ ಡಿವಿಜನ್ಸ್ ಮಾಡಿದ್ದೇವೆ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಿದರು. ಲೆನೇ ವಿತ್ತೀಯ ಆಯೋಗದ ಮುಂದೆ ನಮ್ಮ ಕೇಸ್ ಇಡುವುದಕ್ಕೆ ಅನುಕೂಲವಾಗುತ್ತದೆಂದು ಆ ರೀತಿ ಮಾಡಿದ್ದೇವೆಂದು ಹೇಳಿದ್ದಾರೆ. ನನಗೆ ಅರ್ಥವಾಗುತ್ತಿಲ್ಲ, ಡಿವಿಜನ್ಸ್ ಕ್ರಿಯೇಟ್ ಮಾಡುವುದರಿಂದ.....

ಶ್ರೀ ರಾಮಕೃಷ್ಣ ಹೆಗಡೆ.—ಡಿವಿಷನ್ಸ್ ಮಾಡಿಲ್ಲ. ಬೋರ್ಡ್ಸ್ ಮಾಡುತ್ತೇವೆ. ಪ್ರತಿಯೊಂದು ಡಿವಿಷನ್‌ಗೆ ಪ್ರತ್ಯೇಕವಾದ ಬೋರ್ಡ್ ಮಾಡಂತ್ತೇವೆ.

ಶ್ರೀ ಎಸ್. ಬಂಗಾರಪ್ಪ.—ಅದನ್ನು ಮಾಡುವುದರಿಂದ ಲೆನೇ ವಿತ್ತೀಯ ಆಯೋಗದ ಮುಂದೆ ಸ್ಟ್ರಾಂಗ್ ಕೇಸ್ ಇಡುವುದಕ್ಕೆ ಯಾ ರೀತಿ ಸಹಕಾರಿಯಾಗುತ್ತದೆ ಎಂಬುದು ನನಗೆ ಗೊತ್ತಾಗುತ್ತಿಲ್ಲ. ಹಣವನ್ನು ಹೆಚ್ಚಿಗೆ ಅಲಾಟ್ ಮಾಡಿಸಿಕೊಳ್ಳಬೇಕಾದರೆ ಫೈನಾನ್ಸ್ ಕಮಿಷನ್ ಮುಂದೆ ಏನು ಮಾಡಬೇಕು ಎಂಬುದು ತಮಗೆ ಗೊತ್ತಿದೆ. ಆದರೆ ಬೋರ್ಡ್ ಕ್ರಿಯೇಟ್ ಮಾಡುವುದರಿಂದ ನಿಮ್ಮ ಕೇಸ್ ಯಾವ ರೀತಿ ಶಕ್ತಿಯುತವಾಗುತ್ತದೆಂಬುದು ನನಗೆ ಅರ್ಥವಾಗುತ್ತಿಲ್ಲ. ಆದ್ದರಿಂದ ತಮ್ಮ ಅಭಿಪ್ರಾಯ ಏನು ಎಂದು ಹೇಳಿದರೆ ಒಳ್ಳೆಯದು.

ಶ್ರೀ ಭೀಮಣ್ಣ ಖಂಡ್ರೆ.—ಸರ್ಕಾರ ೨೮-೪-೧೯೮೨ರಲ್ಲಿ...

ಉಪಾಧ್ಯಕ್ಷರು.—ಇದರ ಬಗ್ಗೆ ಅವಕಾಶ ಕೊಟ್ಟಿದ್ದು ೩೦ ನಿಮಿಷ. ಆದರೆ ಈಗ ೫೫ ನಿಮಿಷ ಚರ್ಚೆಗೆ ತೆಗೆದುಕೊಂಡಿದ್ದೀರಿ. ಕ್ಲಾರಿಫಿಕೇಷನ್ ಕೇಳುತ್ತಾ ಹೋದರೆ ೮ ಗಂಟೆಯವರೆಗೆ ಕೇಳುತ್ತಾ ಇರುತ್ತೀರಿ. ಮುಖ್ಯಮಂತ್ರಿಗಳು ಅದಕ್ಕೆ ಉತ್ತರ ಹೇಳುತ್ತಾ ಇರುತ್ತಾರೆ. ಇದಕ್ಕೆ ಕೊನೆಯೇ ಇರಂವುದಿಲ್ಲ. ಮಾನ್ಯ ಮುಖ್ಯಮಂತ್ರಿಗಳು ಈ ಬಗ್ಗೆ ಸಮಾಧಾನಕರವಾದ ಉತ್ತರವನ್ನು ಹೇಳಿರುವುದರಿಂದ ಈ ವಿಷಯವನ್ನು ಇಲ್ಲಿಗೇ ಮುಕ್ತಾಯ ಮಾಡುತ್ತಿದ್ದೇನೆ. ಈಗ ಸಭೆ ಮುಗಿದು ನಾಳೆ ಬೆಳಿಗ್ಗೆ ೧೦ ಗಂಟೆಗೆ ಮತ್ತೆ ಸಮಾವೇಶಗೊಳ್ಳುತ್ತದೆ.

ಸಭೆಯು ೫ ಗಂಟೆ ೫೫ ನಿಮಿಷಕ್ಕೆ ಮುಕ್ತಾಯವಾಗಿ ಪುನಃ ಬುಧವಾರ, ದಿನಾಂಕ ೨೩ನೇ ಮಾರ್ಚಿ ೧೯೮೩ ರಂದು ಬೆಳಿಗ್ಗೆ ಸೇರಲು ನಿಶ್ಚಯಿಸಲಾಯಿತು.